ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸುವುದು."

ಪ್ರಸ್ತಾವ ಅಂಗೀಕೃತವಾಗಿದೆ

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

೩೧-೧-೮೭ರಂದು ಜಿಲ್ಲಾ ಪರಿಷತ್ ಮತ್ತು ಮಂಡಲ ಸದಸ್ಯರ ಸಮ್ಮೇಳನದಂದು ರಾಷ್ಟ್ರಪಿತ ಮತ್ತಿತರ ನಾಯಕರ ಭಿತ್ತಿಚಿತ್ರಗಳನ್ನು ಕೆಡವಿಸಿ ಅಗೌರವ ತೋರಿಸಿರುವ ಬಗ್ಗೆ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ನಾವು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೇವೆ. ಜನವರಿ ೩೧ನೇ ತಾರೀಖಿನ ದಿವಸ ಭಾರತದಲ್ಲಿ ವಾಸವಾಗಿರತಕ್ಕಂಥ ಪ್ರತಿಯೊಬ್ಬ ಪ್ರಜೆಗೂ ಅದರಲ್ಲೂ ಕರ್ನಾಟಕದಲ್ಲಿ ವಾಸವಾಗಿರತಕ್ಕಂಥ ಪ್ರತಿಯೊಬ್ಬ ಮನುಷ್ಯರಿಗೂ ಹೆಂಗಸರಿಗೂ, ಗಂಡಸರಿಗೂ, ಎಲ್ಲರಿಗೂ ಮಾನ ಹೋಗತಕ್ಕಂಥ, ಅವಹೇಳನವಾಗುವಂಥ ಕೃತ್ಯ ನಡೆದಿದೆ. ಅದನ್ನು ಹೇಗೆ ಹೇಳಬೇಕು ಎನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ, ಸಮಸ್ಯೆಯಲ್ಲ ಮನಸ್ಸಿಗೆ ಬಹಳ ನೋವಾಗಿದೆ. ೩೧ನೇ ತಾರೀಖಿನ ದಿವಸ ಏನಾಗಿದೆ ಎಂದರೆ ನಮ್ಮ ಕರ್ನಾಟಕದಲ್ಲಿ ಅಂದರೆ ಇಲ್ಲಿ ಒಂದು ದೊಡ್ಡ ಸಮ್ಮೇಳನ ನಡೆಯಬೇಕು ಎಂದು ಸರ್ಕಾರದವರು ಮಂಡಲ್ ಪಂಚಾಯಿತಿ, ಜಿಲ್ಲಾ ಪರಿಷತ್‌ಗಳಿಗೆ ಚುನಾಯಿತರಾಗಿದ್ದ ಪ್ರತಿನಿಧಿಗಳನ್ನೆಲ್ಲಾ ಕರೆಸಿದ ಮೇಳ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನಮ್ಮ ನಾಯಕರು, ನಮ್ಮ ರಾಷ್ಟ್ರಪಿತ ಗಾಂಧೀಜಿಯವರ ಕೆಲವು ಪೋರ್‌ಟ್ರೇಟ್ಸ್ ಹಾಗೂ ಜವಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿಯವರ, ಶ್ರೀಮತಿ ಇಂದಿರಾಗಾಂಧಿಯವರ ಹಾಗೂ ರಾಜೀವ್ ಗಾಂಧಿಯವರ ಚಿತ್ರಗಳನ್ನು ಪ್ಯಾಲೆಸ್ ಎದುರುಗಡೆ ಟ್ರೇಡ್‌ವೆಲ್ ಸರ್ವೀಸ್‌ನಿಂದ ಹಾಕತಕ್ಕಂಥ ಅಡ್ವರ್‌ಟೈಸ್‌ಮೆಂಟಿನ ಒಂದು ಬೋರ್ಡಿನಲ್ಲಿ ಕೆಲವರೆಲ್ಲಾ ಅಂಟಿಸಿದರು. ದೊಡ್ಡ ದೊಡ್ಡ ಚಿತ್ರಗಳನ್ನು, ಲೈಫ್ ಸೈಸ್ ಚಿತ್ರಗಳನ್ನು ಅಂಟಿಸಿದರು. ಅದನ್ನು ಟ್ರೇಡ್‌ವೆಲ್ ಸರ್ವೀಸ್‌ನಿಂದ ಅನುಮತಿ ಪಡೆದು ಅಂಟಿಸಿದರು. ಭಾರತದ ಮಹಾನಾಯಕರ ಚಿತ್ರಗಳನ್ನು ಮೇನ್‌ರೋಡ್‌ನಲ್ಲಿ ಹಾಕಿತ್ತು. ಅವತ್ತು ಎಲ್ಲಾ ನೋಡಿರಬಹುದು. ದಿನಾಂಕ ೧-೨-೮೭ರ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವುದನ್ನು ಮತ್ತು ಅದೇ ದಿವಸ ಸಂಯುಕ್ತ ಕರ್ನಾಟಕ ಪೇಪರಿನಲ್ಲಿ ಬಂದಿರತಕ್ಕಂಥ ಚಿತ್ರಗಳನ್ನು ನೋಡಿರಬಹುದು.

೧-೦೦ ಪಿ.ಎಂ.

ಈ ಚಿತ್ರಗಳನ್ನು ನೋಡುವುದಕ್ಕೆ ಬಂದವರು ಸಂತೋಷಪಟ್ಟು ಹೋದವರು ಇದ್ದಾರೆ. ಈ ಚಿತ್ರಗಳ ಕೆಳಗೆ ಕ್ಯಾಪ್ಷನ್ ಕೂಡ ಬರೆಯಲಾಗಿತ್ತು. ಮಹಾತ್ಮ ಗಾಂಧೀಜಿಯವರ ಚಿತ್ರದ ಕೆಳಗೆ ಗ್ರಾಮ ಸ್ವರಾಜ್ಯಕ್ಕಾಗಿ ಶ್ರಮಿಸಿದವರು, ಜವಹರಲಾಲ್ ನೆಹರೂರವರ ಚಿತ್ರದ ಕೆಳಗೆ ಶಾಂತಿ ಧೂತರು, ಲಾಲ್ ಬಹದ್ದೂರ್ ಶಾಸ್ತ್ರಿಯವರ ಚಿತ್ರದ ಕೆಳಗೆ ಜೈಕಿಸಾನ್, ಶ್ರೀಮತಿ ಇಂದಿರಾಗಾಂಧಿಯವರ ಚಿತ್ರದ ಕೆಳಗೆ ಬಡತನದ ನಿರ್ಮೂಲನೆಗಾಗಿ ಪ್ರಾಣಾರ್ಪಣೆ ಮಾಡಿದವರು, ರಾಜೀವ್‌ಗಾಂಧಿಯವರ ಚಿತ್ರದ ಕೆಳಗೆ ರಾಷ್ಟ್ರದ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ದುಡಿಯುತ್ತಿರುವವರು ಎಂದು ಬರೆಯಲಾಗಿದೆ. ಇದನ್ನು ಯಾರೋ ಪುಣ್ಯಾತ್ಮರು ನೋಡಿದವರು ಪತ್ರಿಕೆಯಲ್ಲಿ ತಿಳಿದುಬಂದಿರುವ ಪ್ರಕಾರ ಚಿತಾವಣೆ ಮಾಡಿದ್ದಾರೆ. ಪತ್ರಿಕೆಯಲ್ಲಿ

ಬಂದಿರುವುದು ಈ ರೀತಿ ಇದೆ, ಸಂಯುಕ್ತ ಕರ್ನಾಟಕ ಪತ್ರಿಕೆ ೧-೨-೧೯೮೭ರಂದು ಪ್ರಕಟವಾಗಿದೆ.

ಮಹಾತ್ಮನಿಗೇ ಅರ್ಧ ಚಂದ್ರ ?

''ಜಿಲ್ಲಾ ಪರಿಷತ್ತಿನಂತಹ ಗ್ರಾಮ ಸ್ವರಾಜ್ಯದ ಸ್ಫೂರ್ತಿ ಶಕ್ತಿ ಮಹಾತ್ಮ ಗಾಂಧಿ ಹಾಗೂ ನೆಹರೂ, ಇಂದಿರಾಗಾಂಧಿ, ಶಾಸ್ತ್ರಿ, ಪ್ರಧಾನಿ ರಾಜೀವ್‌ಗಾಂಧಿಯವರ ಚಿತ್ರಗಳಿದ್ದ ಬೃಹತ್ ಭಿತ್ತಿ ಚಿತ್ರವನ್ನು ಕೆಡವಿಸಿದ ಘಟನೆ ಪ್ಯಾಲೆಸ್ ಮೈದಾನದಲ್ಲಿ ಬಳ್ಳಾರಿ ರಸ್ತೆ ಪ್ರವೇಶ ದ್ವಾರದಲ್ಲಿ ಇಂದು ನಡೆಯಿತೆಂದು ತಿಳಿದು ಬಂದಿದೆ. ನಿನ್ನೆ ರಾತ್ರಿಯೇ ಯುವ ಕಾಂಗ್ರೆಸ್ ಸದಸ್ಯರು ಮೇಲ್ಕಂಡ ಎಲ್ಲ ನಾಯಕರ ತೈಲ ಚಿತ್ರಗಳಿದ್ದ ೫೦x೬೦ ಅಡಿ ದೊಡ್ಡದಾದ ಭಿತ್ತಿಚಿತ್ರವನ್ನು ನಿರ್ಮಿಸಿದ್ದರೆಂದೂ ಬೆಳಿಗ್ಗೆ ೧೦ ಗಂಟೆಯ ಹೊತ್ತಿಗೆ ಜಮಾಯಿಸಿದ್ದ ಜನರೂ ಹಲವಾರು ಭಿತ್ತಿ ಚಿತ್ರಗಳನ್ನು ವೀಕ್ಷಿಸಿದರೆಂದೂ ಗೊತ್ತಾಗಿದೆ.

ಚಿತಾವಣೆ:

ಕೆಲವು ಉನ್ನತ ಪೋಲೀಸ್ ಅಧಿಕಾರಿಗಳು ಮಾಜಿ ಸಚಿವರೊಬ್ಬರ ಚಿತಾವಣೆಯಿಂದ ಭಿತ್ತಿ ಚಿತ್ರವನ್ನು ಕೆಡವಿಸಿದರೆಂದು ಕೆಲವು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ. ಯುವ ಕಾಂಗ್ರೆಸ್ ಸದಸ್ಯರೊಬ್ಬರ ಕ್ಯಾಮರಾವನ್ನು ಸಹ ಪೋಲೀಸರು ಕಸಿದುಕೊಂಡ ರೆನ್ನಲಾಗಿದೆ. ಆದರೆ ಈ ಬಗ್ಗೆ ಕೇಳಿದಾಗ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಏನೂ ತಿಳಿಯದೆಂಬಂತೆ ತಲೆಯಾಡಿಸಿದರು. ಮೈದಾನಕ್ಕೆ ಬಂದ ವಾಹನಗಳು ಜನತಾ ಪಕ್ಷದ ಧ್ವಜ ಹಾರಿಸಿದ್ದರೆ ಮಾತ್ರ ಬಿಡಲಾಗುತ್ತಿತ್ತು, ಕಾಂಗ್ರೆಸ್ ಧ್ವಜವಿದ್ದರೆ ಬಿಡುತ್ತಿರ ಲಿಲ್ಲವೆಂದು ಕಾಂಗ್ರೆಸ್ ಮುಖಂಡರು ಆರೋಪಿಸಿದರು.''

ಜನಗಳು ಇದನ್ನು ನೋಡಬಾರದು ಎಂದು ಈ ರೀತಿ ಮಾಡಲಾಯಿತೇ ? ರಾಷ್ಟ್ರನಾಯಕರ ಚಿತ್ರಗಳನ್ನು ನೋಡಿದ್ದರೆ ಜನಗಳಲ್ಲಿ ಸ್ಫೂರ್ತಿ ಬರುತ್ತಿರಲಿಲ್ಲವೇ? ಇವರ ಚಿತ್ರಗಳನ್ನು ನೋಡಿ ದಂಥ ಅಕ್ರಮಗಳನ್ನೇನಾದರೂ ಇವರು ಮಾಡಿದ್ದರೆ ಎನ್ನುವ ಪ್ರಶ್ನೆ ಬರುತ್ತದೆ. ಭಿತ್ತಿ ಚಿತ್ರ ಗಳನ್ನು ಎಷ್ಟರಮಟ್ಟಿಗೆ ಹರಿದುಹಾಕಿದ್ದಾರೆಂದರೆ, ಅದರ ಬಗ್ಗೆ ಫೊಟೋಗಳು ಇವೆ. ಅವುಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ತಾವುಗಳೇ ನೋಡಿ. ಒಬ್ಬ ಹುಡುಗ ಫೊಟೋ ತೆಗೆಯುವುದಕ್ಕೆ ಬಂದರೆ, ಅಧಿಕಾರಿಗಳು ಕ್ಯಾಮರಾ ಕಸಿದುಕೊಂಡು ರೀಲ್ ತೆಗೆಯಬೇಕೆಂದು ಆರ್ಡರ್ ಮಾಡಿದ್ದಾರೆ. ರೀಲ್ ತೆಗೆಯುವುದಿಲ್ಲವೆಂದು ಹೇಳಿದಾಗ ಕ್ಯಾಮರಾ ಕಸಿದುಕೊಂಡು ಎಲ್ಲಾ ಹಾಳು ಮಾಡಿದ್ದಾರೆ. ರಾಷ್ಟ್ರನಾಯಕರ ಚಿತ್ರಗಳನ್ನು ಏತಕ್ಕೆ ಹರಿದುಹಾಕಿದ್ದಾರೆ? ಅವರು ರಾಷ್ಟ್ರನಾಯಕರಲ್ಲವೇ? ಅಲ್ಲಿ ದೊಡ್ಡದಾಗಿ ಭಾಷಣ ಮಾಡುವುದು ಒಂದು, ಇಲ್ಲಿ ಮಾಡುತ್ತಿರುವುದು ಇನ್ನೊಂದು. ಇವರು ಕಾಂಗ್ರೆಸ್ ಪಾರ್ಟಿ ನಾಯಕರುಗಳಲ್ಲ. ರಾಷ್ಟ್ರನಾಯಕರುಗಳಿಗೆ ಅವಮಾನ ಮಾಡುವುದೆಂದರೆ ಈ ಅರ್ಥ ಇದೆಯೆ ? ದೊಡ್ಡ ದೊಡ್ಡ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಇವರ ಜೊತೆಗೆ ದೊಡ್ಡ ಮಾಜಿ ಮಂತ್ರಿಗಳೂ ಇದ್ದರೆಂದು ಕೇಳಿದ್ದೇನೆ. ಇದು ನನಗೆ ಗೊತ್ತಿಲ್ಲ. ಈ ರೀತಿ ಆಗಿರತಕ್ಕ ಅನ್ಯಾಯ, ಅಗೌರವ ನೋಡಿದರೆ ಅದರ ಬಗ್ಗೆ ಹೇಳಲಿಕ್ಕೆ ಆಗುವುದಿಲ್ಲ. ಆ ರೀತಿ ಇದೆ. ಇದರ ಬಗ್ಗೆ ಕಾರ್ಪೊರೇಷನ್‌ನವರಿಗೆ ಕೇಳಿದಾಗ ಅವರು ನೀವು ಹಾಕಿಕೊಳ್ಳಬಹುದು ಎಂದು ಪರ್‌ಮಿಷನ್ ಕೊಟ್ಟಿದ್ದಾರೆ. ಟ್ರೇಡ್‌ವೆಲ್ ಸರ್ವೀಸ್‌ನವರಿಂದಲೂ ಪರ್‌ಮಿಷನ್ ತೆಗೆದು ಕೊಂಡಿದೆ. ಇಂಥಾದ್ದರಲ್ಲಿ ಇವರು ಹೋಗಿ ವಿನಾಕಾರಣ ಮಾಡುತ್ತಿರುವುದು ನೋಡಿದರೆ ನಾವು ಏನು ಹೇಳಬೇಕೆಂದು ಗೊತ್ತಾಗುವುದಿಲ್ಲ. ಇವರು ಆ ಸಭೆಯಲ್ಲಿ ಬಂದು ಹೇಳುವಂಥ ಉಪದೇಶ ನೋಡಿದರೆ ಮುಂದೆ ನೀವೇ ಡೆವಲಪ್‌ಮೆಂಟ್ ವರ್ಕ್ ಎಲ್ಲಾ ಮಾಡಬೇಕೆಂದು ಉಪನ್ಯಾಸ ಮಾಡು ವುದು. ಆದರೆ ಈ ರೀತಿ ಮಾಡಿರತಕ್ಕದ್ದು ಮಾನ ಮರ್ಯಾದೆಯುವರು ಮಾಡತಕ್ಕ ಕೆಲಸವೇ ? ಈ ರೀತಿ ಮಾಡಿರತಕ್ಕ ಕೆಲಸದಿಂದ ಯಾರಿಗಾದರೂ ಮರ್ಯಾದೆ ಉಳಿದಿದೆಯೆ ? ಇದರಿಂದ ಯಾರಾದರೂ ತಲೆ ಎತ್ತಿ ನಡೆಯಲಿಕ್ಕೆ ಆಗುತ್ತದೆಯೇ ? ಅಪೊಸಿಷನ್‌ನಲ್ಲಿ ಇರುವವರಾಗಲಿ, ಯಾರೇ ಆಗಲಿ, ಕರ್ನಾಟಕದಲ್ಲಿ ಈ ರೀತಿ ಆಯಿತು ಅಂದರೆ ಏನಾದರೂ ತಲೆ ಎತ್ತಿ ನಡೆಯಲಿಕ್ಕೆ ಸಾಧ್ಯವೇ ? ಬಹಳ ಕೀವಲವಾಗಿ ತಿಳಿದುಕೊಂಡು ಮಹಾತ್ಮಗಾಂಧಿಯವರ ಫೋಟೋ ಹರಿದು, ತುಂಡು ತುಂಡು ಮಾಡಿ ಬಿಸಾಕಿದ್ದಾರೆ ನಮ್ಮಲ್ಲಿ ಹೇಳುವುದು ಏನು ಈ ದೇಶದ ಪಿತಾಮಹ ಅವರ ಕನಸನ್ನು ನನಸು ಮಾಡು ತ್ತೇವೆಂದು ಎಲ್ಲಾ ದೇಶದವರು ಮಹಾತ್ಮ ಗಾಂಧಿಯವರ ಚಿತ್ರವನ್ನು ಚಿಂದಿ, ಚಿಂದಿ, ತುಂಡು, ತುಂಡು ಮಾಡಿರುವುದನ್ನು ನೋಡಿದರೆ ಅವರು ಏನು ಅಂದುಕೊಳ್ಳುತ್ತಾರೆ. ಈ ಫೋಟೋಗಳನ್ನು ನಾನು ಅಧ್ಯಕ್ಷರ ಕಡೆ ಕಳುಹಿಸಿಕೊಡುತ್ತೇನೆ. (ಶ್ರೀಮತಿ ನಾಗರತ್ನಮ್ಮನವರು ಫೋಟೋಗಳನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು) ಈ ರೀತಿ ಮಾಡಿರುವವರು ಯಾವುದೇ ಆಫೀಸಿನಲ್ಲಿದ್ದು, ಎಷ್ಟೇ ದೊಡ್ಡ

ವರಾಗಿರಲಿ ಅವರನ್ನು ಹಾಗೆಯೇ ಬಿಡುವುದು ಬೇಡ. ಇದರಲ್ಲಿ ಒಬ್ಬರು ಮಾಜಿ ಮಂತ್ರಿಗಳು ಇದ್ದರೆಂದು ಹೇಳುತ್ತಾರೆ. ದೊಡ್ಡ ದೊಡ್ಡ ಅಧಿಕಾರಿಗಳು ಇದ್ದರೆಂದು ಹೇಳುತ್ತಾರೆ. ಅವರು ಎಷ್ಟೇ ದೊಡ್ಡವರಾಗಿರಲಿ ಕೂಡಲೇ ಒಂದು ಹೌಸ್ ಕಮಿಟಿ ಮಾಡಿ ತನಿಖೆ ಮಾಡತಕ್ಕ ಕೆಲಸ ಮಾಡ ಬೇಕು ಇದರ ಬಗ್ಗೆ ಬೇಕಾದಷ್ಟು ಆಧಾರಗಳು ಇವೆ. ಆದ್ದರಿಂದ ಇದನ್ನು ಅಡ್ಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಅಧ್ಯಕ್ಷರೆ,.........

ಅಧ್ಯಕ್ಷರು.—೭೮ರ ನಿಯಮದ ಪ್ರಕಾರ ಚರ್ಚೆಗೆ ಒಪ್ಪಿಕೊಳ್ಳುತ್ತಾರೋ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಇದರ ಬಗ್ಗೆ ಸಾಕಷ್ಟು ವಿಚಾರ ಹೇಳಬೇಕಾಗಿದೆ ನಾವು ಹೇಳುವುದರಿಂದ ಎಕ್ಸ್‌ಪ್ಲನೇಷನ್ ಕೊಡಲಿಕ್ಕೆ ಆಗಲಿ, ಒಪ್ಪಲಿಕ್ಕೆ ಆಗಲಿ ಸಹಾಯ ಆಗುತ್ತದೆ.

ಶ್ರೀ ಬಿ.ಎ. ಉಮರಬ್ಬ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕಿ ಶ್ರೀಮತಿ ನಾಗರತ್ನಮ್ಮ ಅವರು ಸಂಕ್ಷಿಪ್ತವಾಗಿ ಸಭೆಯ ಮುಂದಿಟ್ಟಿರುವಂಥ ಒಂದು ದುರ್ಘಟನೆಯ ಚಿತ್ರವನ್ನು ಸ್ವಲ್ಪ ವಿವರಣಾತ್ಮಕವಾಗಿ ನಾನು ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಮೇಲ್ಮುಖವಾಗಿ ನೋಡಿದಾಗ ಸಣ್ಣ ಘಟನೆ ಏನೋ ಎಂದು ಅನಿಸುವಂತೆ ಇದ್ದರೂ, ಈ ಘಟನೆಯನ್ನು ಆಳವಾಗಿ ನೋಡಿದಾಗ ಇದು ಎರಡು ರೀತಿಯಲ್ಲಿ ಕಾಣುತ್ತದೆ. ಒಂದು ರಾಷ್ಟ್ರದ ಗೌರವದ ಪ್ರಶ್ನೆ ಬಂದರೆ ಇನ್ನೊಂದು ಘಟನೆ ಉಲ್ಬಣವಾಗಿದ್ದರೆ ಏನಾಗುತ್ತಿತ್ತು ? ಈ ಎರಡು ದೃಷ್ಟಿಯಲ್ಲಿ ವಿಮರ್ಶೆ ಮಾಡಿದಾಗ ಒಂದು ಅಪೂರ್ವ ಹಾಗೂ ಅತ್ಯಂತ ಮನಸ್ಸಿಗೆ ದುಃಖ ತರತಕ್ಕ ಘಟನೆ ಅವೊತ್ತು ಆಗಿದೆ ಎಂದು ಹೇಳಲೇ ಬೇಕಾಗಿದೆ. ದಿನಾಂಕ ೩೧ರಂದು ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯತ್ ಸದಸ್ಯರ ಸಮಾ ವೇಶ ಬೆಂಗಳೂರಿನಲ್ಲಿ ನಡೆಯುತ್ತದೆ ಎನ್ನುವ ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ ಬರುವಂಥ ಸದಸ್ಯರಿಗೆ ಕೆಲವು ಅಮೂಲ್ಯವಾದಂಥ ಸಂದೇಶಗಳನ್ನು ಕೊಡಬೇಕೆಂದು ಉದ್ದೇಶ ಇಟ್ಟು ಕೆಲವು ದೊಡ್ಡ ಪ್ರಮಾಣದ ಸುಮಾರು ೩೦–೪೦ ಅಡಿ ಎತ್ತರದ ಮೂರು ಭಿತ್ತಿ ಚಿತ್ರಗಳನ್ನು ಪ್ರಕಟಿಸಿದ್ದೆವು ಎಲ್ಲಿ ಅದನ್ನು ಜಾಹಿರುಪಡಿಸಬೇಕಾಗಿತ್ತು ಅದರ ಬಗ್ಗೆ ಸಂಬಂಧಪಟ್ಟವರಲ್ಲಿ ಒಪ್ಪಿಗೆ ಪಡೆದಿದ್ದು, ಕಾರ್ಪೊರೇಷನ್‌ನವರಿಗೆ ವಿಚಾರ ಮಾಡಿದಾಗ ಹಾಕಬಹುದು ಎಂದು ಹೇಳಿದ್ದಾರೆ, ಎರಡು ದಿವಸಗಳ ಕಾಲ ಆಲ್‌ರೆಡಿ ಇರುವಂಥ ಹೋಲ್ಡಿಂಗ್‌ನ್ನು ಗುತ್ತಿಗೆಪಡೆದಿದ್ದು ಟ್ರೇಡ್‌ವೆಲ್ ಸರ್ವೀಸ್‌ನವರು ಎರಡು ದಿನಗಳ ಅವಕಾಶ ಪರವಾನಿಗೆ ಮೂಲಕ ಕೊಟ್ಟಿದ್ದರು. ಮೊದಲನೇ ದಿನ ರಾತ್ರಿ ಈ ಬಿತ್ತಿಪತ್ರ ಗಳನ್ನು ನಮ್ಮ ಕಾರ್ಯಕರ್ತರು ನಿಲ್ಲಿಸಿದರು. ಅವರು ನಿಲ್ಲಿಸತಕ್ಕ ಸಂದರ್ಭದಲ್ಲಿ ಅಲ್ಲಿಯೇ ಅಡ್ಡಾಡು ತ್ತಿದ್ದ ಪೋಲೀಸರು ನೋಡಿದ್ದಾರೆ, ಪೋಲೀಸ್ ಅಧಿಕಾರಿಗಳೂ ನೋಡಿದ್ದಾರೆ ಮತ್ತು ಇನ್ನೂ ಅನೇಕ ನೂರಾರು ಮಂದಿ ಸಾರ್ವಜನಿಕರು ಇದನ್ನು ನೋಡಿದ್ದಾರೆ. ಆಗ ಯಾರೂ ಕೂಡ ಆ ಬಗ್ಗೆ ಕೇಳಲಿಲ್ಲ. ಆದರೆ ೩೧ರಂದು ಬೆಳಿಗ್ಗೆ ಎಲ್ಲರಿಗೂ ಆಘಾತವಾಗುವಂಥ ಒಂದು ಘಟನೆ ನಡೆದು ಹೋಯಿತು. ಪೋಲೀಸ್ ಅಧಿಕಾರಿಗಳು, ಹಾಗೂ ಇನ್ನೂ ಬೇರೆ ಬೇರೆ ಉನ್ನತಾಧಿಕಾರಿಗಳು ಇದ್ದ ಸಂದರ್ಭದಲ್ಲಿ ಅವರ ಸಮ್ಮುಖದಲ್ಲೇ ಪೋಲೀಸರು ಈ ಬಿತ್ತಿ ಚಿತ್ರಗಳನ್ನು ಕಿತ್ತು ಕಿತ್ತು ಕೆಳಗೆ ಹಾಕಿ ದರು. ನಂತರ ಅದನ್ನೆಲ್ಲಾ ಬೂಟು ಕಾಲಿನಿಂದ ಒಂದು ಬದಿಗೆ ಹಾಕತಕ್ಕ ಕೆಲಸವನ್ನೂ ಕೂಡ ಅವರು ಸುಮಾರು ಬೆಳಿಗ್ಗೆ ೯ ಅಥವಾ ೯–೩೦ ಗಂಟೆಯ ಸಮಯದಲ್ಲೇ ಮಾಡಿದರು. ನಮ್ಮ ಛಾಯಾಚಿತ್ರ ಗ್ರಾಹಕ ಅಶೋಕ್ ಎನ್ನುವವರು ಈ ಚಿತ್ರವನ್ನು ಫೋಟೋವನ್ನು ತೆಗೆದುಕೊಂಡು ಅದನ್ನು ಚಿತ್ರೀಕರಿಸಲು ಹೊರಟರು. ಇನ್ನು ಕೆಲವರು ಈ ಭಿತ್ತಿಪತ್ರಗಳನ್ನು ಕಿತ್ತು ಹಾಕಿದ್ದು ಸರಿಯಲ್ಲವೆಂದು ಪ್ರತಿಭಟಿಸಿದರು. ನೂರಾರು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ ಸದಸ್ಯರು ಈ ಘಟನೆಯನ್ನು ಕಣ್ಣಿಂದ ನೋಡಿದ್ದಾರೆ. ಅಷ್ಟು ಹೊತ್ತಿಗೆ ಪೋಲೀಸರು ಬಂದು ಈ ಅಶೋಕ್ ರವರನ್ನು ಹಿಡಿದುಕೊಂಡು ನೀನು ಯಾರು ? ಈ ಫೋಟೋವನ್ನು ಏತಕ್ಕೆ ತೆಗೆದುಕೊಂಡೆ ? ಎಂದು ಕೇಳಿದಾಗ ನಮ್ಮ ಫೋಟೋಗ್ರಾಫರ್ ಏನು ಹೇಳಿದರು ಎಂದರೆ ನಾನೂ ಒಬ್ಬ ಕಾರ್ಮಿಕ, ಆದ್ದರಿಂದ ಈ ಫೊಟೋವನ್ನು ತೆಗೆದುಕೊಂಡೆ ಎಂದರು. ಆಗ ಆ ಪೋಲೀಸರು ಏನು ಹೇಳಿದರು ಎಂದರೆ No nobody is permitted, whoever he may be, You will not be allowed to take the photographs. Get back the reels. ಎಂದು ಹೇಳಿ ಅವನ ಕ್ಯಾಮೆರಾವನ್ನು ಕಿತ್ತುಕೊಳ್ಳುವುದಕ್ಕೆ ಹೋದರು. ಅವರು ಕೊಡದೇ ಹೋದಾಗ ನೀನು ತೆಗೆದಿರತಕ್ಕ ಫೋಟೋದ ರೀಲನ್ನು (ಫಿಲ್ಮಂ) ಕೊಡು, ಇಲ್ಲದಿದ್ದರೆ ನಿನ್ನ ಕ್ಯಾಮೆರಾವನ್ನೇ ಕಿತ್ತು ಕೊಂಡು ಹೋಗಬೇಕಾಗುತ್ತದೆ ಎಂದು ಬೆದರಿಕೆಯನ್ನು ಹಾಕಿದರು. ನಂತರ ಅವನು ಏನು ಹೇಳಿದ ಎಂದರೆ ನಾನು ಫೋಟೋವನ್ನು ಕೊಡುವುದಿಲ್ಲ ಎಂದು ಪಟ್ಟು ಹಿಡಿದಾಗ ಪೊಲೀಸರು ಮುಂದೆ ನುಗ್ಗಿ

ಅವನ ಹತ್ತಿರ ಇದ್ದ ಕ್ಯಾಮೆರಾವನ್ನು ಕಿತ್ತುಕೊಂಡರು. ಆಗ ಅವನು ನನಗೆ ಎಂಡಾರ್ಸ್‌ಮೆಂಟ್‌ನ್ನು ಕೊಡಿ ಎಂದು ಕೇಳಿದಾಗ No, we will not give endorsement Give it. ಎಂದು ಬಹಳ ಫೋರ್ಸ್ ಆಗಿ ತನ್ನುಕೊಂಡು ಅವನನ್ನೂ ಎಳೆದುಕೊಂಡು ಹೋದರು. ಇದೆಲ್ಲಾ ನಿಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಈದಾದ ನಂತರ ನೂರಾರು ಮಂದಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ ಸದಸ್ಯರು ನಮ್ಮ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಹತ್ತಿರ ಹೋಗಿ ಈ ರೀತಿ ಭಿತ್ತಿಪತ್ರಗಳನ್ನು ಹರಿದು ಅಗೌರವ ತೋರಿಸಿ ಅಪಮಾನ ಮಾಡಿದ್ದಾರೆ, ಅದರಲ್ಲಿ ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ರಾಜೀವ್‌ಗಾಂಧಿ ಮುಂತಾದವರ ಚಿತ್ರಗಳಿದ್ದ ಭಿತ್ತಿಪತ್ರಗಳನ್ನು ಹರಿದು ಹಾಕಿ ರಾಷ್ಟ್ರನಾಯಕರಿಗೆ ಅಪಮಾನ ಮಾಡಿರುವುದರಿಂದ ನಾವು ಈ ಸಭೆಯನ್ನೇ ಬಹಿಷ್ಕರಿಸಬೇಕಾಗಿದೆ. ಅಷ್ಟೇ ಅಲ್ಲ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರೂ ಕೂಡ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಆಸ್ಕರ್ ಫರ್ನಾಂಡೀಸ್‌ರವರ ಹತ್ತಿರ ಹೋಗಿ ಈ ರೀತಿ ಅಪಮಾನ ಮಾಡಿರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಈಗ ಸಮಾವೇಶ ನಡೆಯುತ್ತಿರುವುದರಿಂದ ನಾವು ಯಾವ ಗಲಾಟೆಯನ್ನೂ ಮಾಡಬಾರದು. ಆಕಸ್ಮಾತ್ ಏನಾದರೂ ಗಲಾಟೆಯಾಗಿ ಒಂದೇ ಒಂದು ಕಿಡಿ ಹತ್ತಿದರೂ ಕೂಡ ಬಹಳ ದೊಡ್ಡ ಅನಾಹುತ ಆಗುತ್ತದೆ, ಮುಗ್ಧ ಜನರು ವಿನಾಕಾರಣ ಈ ಗಲಾಟೆಯಲ್ಲಿ ಸಿಕ್ಕಿಹಾಕಿಕೊಂಡು ಅಂಗವಿಕಲರಾಗುತ್ತಾರೆ. ಆದ್ದರಿಂದ ನೀವು ಯಾರೂ ಕೂಡ ದಯವಿಟ್ಟು ಗಲಾಟೆ ಮಾಡಬೇಡಿ, ಎಲ್ಲರೂ ಹಿಂದಕ್ಕೆ ಹೋಗಿ. ಈ ಸಮಾವೇಶ ಆದ ಮೇಲೆ ಸರ್ಕಾರದ ಜೊತೆಗೆ ಕೂತು ವಿಚಾರವನ್ನು ಪ್ರಸ್ತಾಪ ಮಾಡೋಣ, ನೀವೆಲ್ಲರೂ ಸಮಾಧಾನದಿಂದ ವಾಪಸು ಹೋಗಿ ಎಂದು ಕೇಳಿಕೊಂಡಿದ್ದರಿಂದ ಎಲ್ಲರನ್ನೂ ವಾಪಸು ಕಳುಹಿಸಿದ್ದಾಯಿತು. ನಾವು ವಾಪಸು ಬಂದನಂತರ ನನಗೆ ಒಂದು ಅನುಭವ ಆಯಿತು. ಕೆಲವು ಈ ಘಟನೆಯ ಪ್ರತ್ಯಕ್ಷ ದರ್ಶಿಗಳು ಬಂದು ನನಗೆ ಹೇಳಿದರು, ಏನು ಉಮರಬ್ಬನವರೆ ಈಗ್ಗೆ ಒಂದು ಗಂಟೆ ಮೊದಲಿನವರೆಗೂ ಪೋಲೀಸರು ಇತ್ತ ಬಂದಿರಲಿಲ್ಲ. ಆದರೆ ಯಾರೋ ಒಬ್ಬ ಮಾಜಿ ಮಂತ್ರಿಗಳು ಇಲ್ಲಿ ಬಂದು ತಮ್ಮ ಕಾರನ್ನು ನಿಲ್ಲಿಸಿ ಈ ಭಿತ್ತಿಪತ್ರಗಳ ಕಡೆಗೆ ದೃಷ್ಟಿಹರಿಸಿ ಹೋದ ಸುಮಾರು ಅರ್ಧ–ಮುಕ್ಕಾಲು ಗಂಟೆಯಲ್ಲಿ ಈ ಘಟನೆ ನಡೆಯಿತು ಎಂದು ಹೇಳಿದರು. ಆಗ ನಾನು ಒಂದು ಮಾತನ್ನು ಹೇಳಿದೆ. ಕಾರಣ ಆಗ ಸಮಾವೇಶ ನಡೆಯುತ್ತಿದ್ದುದರಿಂದ ನಾನು ವೇದಿಕೆಯ ಮೇಲಿದ್ದೆ. ಮಾಜಿ ಮಂತ್ರಿ ಎಂದರೆ ಯಾರಿರಬಹುದು ? ಅವರ ಮೇಲೆ ಇವರು ಏತಕ್ಕೆ ಹೇಳುತ್ತಿದ್ದಾರೆಂದು ಯೋಚನೆ ಮಾಡುತ್ತಿದ್ದೆ. ಅಷ್ಟು ಹೊತ್ತಿಗೆ ಒಬ್ಬರು ಮಾಜಿ ಮಂತ್ರಿಗಳು ತಮ್ಮ ಕಾರಿನಲ್ಲಿ ನನ್ನ ಎದುರಿಗೆ ಹಾದು ಹೋಗುತ್ತಿದ್ದರು. ಆಗ ನಾನು ಅವರನ್ನು ಕೂಗಿ ನಿಲ್ಲಿಸಿ ಅವರನ್ನೇ ಕೇಳಿದೆ. ಏನು ಸ್ವಾಮಿ, ನೀವು ಬಹಳ ದೊಡ್ಡ ಸಾಹಸವನ್ನು ಮಾಡಿದಿರಿ ಮಹಾತ್ಮಗಾಂಧಿ ಇಂದಿರಾಗಾಂಧಿ, ರಾಜೀವ್ ಗಾಂಧಿ ಮುಂತಾದವರ ಫೋಟೋಗಳನ್ನು ಕಿತ್ತುಹಾಕಿಸಿದ್ದಕ್ಕೆ ನಿಮಗೆ ಆದ ಪ್ರಯೋಜನವಾದರೂ ಏನು ಎಂದು. ಆದಕ್ಕೆ ಅವರು ಮಾತನಾಡಿದ ಧಾಟಿಯನ್ನು ನೋಡಿದಾಗ ನನಗೆ ತಿಳಿಯಿತು, ಈ ಘಟನೆಗೆ ಇವರದೇ ಚಿತಾವಣೆ, ಆದ್ದರಿಂದಲೇ ಈ ಘಟನೆಯಾಗಿದೆ ಎಂದು ಚೆನ್ನಾಗಿ ತಿಳಿಯಿತು, ೩೦ ರಂದು ಬೆಳಿಗ್ಗೆ ೧೧ ಗಂಟೆಗೆ ನಾವು ಮಹಾತ್ಮಾ ಗಾಂಧೀಜಿಯವರನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸುವ ಸಂದರ್ಭದಲ್ಲಿ ಈ ರೀತಿ ಘಟನೆ ನಡೆದಿದೆ ...

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ಮಾಜಿ ಮಂತ್ರಿಗಳು ಎಂದು ಹೇಳಿದಿರಿ. ಅವರ ಹೆಸರು ಏನು ಎಂದು ಹೇಳಲಿಕ್ಕೆ ಸಾಧ್ಯವೇ ?

ಶ್ರೀ ಬಿ.ಎ. ಉಮರಬ್ಬ.—ತಮ್ಮ ಮುಂಭಾಗದಲ್ಲಿ ಕುಳಿತಿರತಕ್ಕಂಥ ಸನ್ಮಾನ್ಯ ಶ್ರೀ ಜೀವರಾಜ ಆಳ್ವರವರು ಅವರು ನಮಗೆ ಸಿಕ್ಕಿದರು. ಅವರು ಇಲ್ಲಿ ಇದ್ದಾರೆ. ಇದೇ ಉತ್ತರವನ್ನು ಕೊಟ್ಟಿದ್ದೇನೆ. ಅಷ್ಟು ಮಾತ್ರ ಅವರಿಗೆ ನಾನು ಹೇಳಿದೆ, ಈ ವೇದಿಕೆಯಿಂದ ಧಿಕ್ಕಾರ ಹೇಳಿ ಕಿರುಚುತ್ತೇನೆಂದು ಈವತ್ತಿನದಿವಸ ಜವಾಬ್ದಾರಿ ಇದೆ, ಏತಕ್ಕೆ ಮಾಡಬಾರದೆಂದು ಹೇಳಿ ಸಹಸ್ರಾರು ಮಂದಿ ಸೇರಿರುವಂಥ ಸಂದರ್ಭದಲ್ಲಿ ಇಂಥ ದುರ್ಘಟನೆ ಆಗಬಾರದೆಂದು ಹೇಳಿ ಬಾಯಿ ಮುಚ್ಚಬೇಕಾಗಿ ಬಂದಿತು. ಉಮರಬ್ಬ ಅಂಥದು ಏನು ಆಗದೆ ಇರುವಂತೆ ನೋಡಿಕೊಳ್ಳಬೇಕೆಂದು ಹೇಳಿ ಸಮಾದಾನ ಹೇಳಿಕೊಂಡು ಮುಂದೆ ಹೋಗಿದ್ದೇವೆ. ಇದು ನಾನು ಮತ್ತು ಅವರ ಆತ್ಮ ಸಾಕ್ಷಿಗೆ ಸಂಬಂಧಪಟ್ಟ ವಿಚಾರ. ಕೇವಲ ಹೇಳಿಕೆಗೆ ಮಾತ್ರವಲ್ಲವೆಂದು ಹೇಳಿ ಸ್ಪಷ್ಟವಾಗಿ ಅವರ ಎದುರಿನಲ್ಲಿ ತಮ್ಮ ಸಮ್ಮುಖದಲ್ಲಿ ತಮ್ಮ ಒಪ್ಪಿಗೆಯ ಮೂಲಕ ಹೇಳುತ್ತಿದ್ದೇನೆ. ಪೂಜ್ಯ ಗಾಂಧೀಜಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿದ ಮಾರನೆದಿನ ಗಾಂಧೀಜಿಯವರ ಭಾವಚಿತ್ರಕ್ಕೆ ಅಪಮಾನ ಸರ್ಕಾರದ ಉನ್ನತ ಅಧಿಕಾರಿಗಳು ಹಾಗೂ ಸರ್ಕಾರಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಚಿತಾವಣೆಯ ಮೂಲಕ ಮಾಡಿದ್ದಾರೆಂದರೆ ಒಂದರಿ ಅಪಮಾನದ ಉದ್ದೇಶವಾದರೆ ಇನ್ನೊಂದು ಅಪಮಾನ ಮಾಡುವ ಪ್ರತಿಭಟನೆ. ಆದರೆ ಆ

ಪ್ರತಿಭಟನೆಯನ್ನು ಇನ್ನೊಬ್ಬರ ತಲೆಯ ಮೇಲೆ ಗೂಬೆ ಕೂರಿಸುವುದರ ಮೂಲಕ ಯಾವುದೇ ಗಲಾಟೆಯಾಗಲಿ ಯಾರ ಪ್ರಾಣ ಹೋಗಲಿ, ಯಾರದೇ ಕೈಕಾಲು ಹೋಗಲಿ ರಾಜಕೀಯದಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಬೇಕು ಎನ್ನುವಂಥ ಒಂದು ಆಳವಾದ ಪಿತೂರಿಯನ್ನು ಮಾಡಿದ್ದಾರೆಂದು ಹೇಳಿ ನಾನು ಪ್ರಾಮಾಣಿಕವಾಗಿ ಈವತ್ತು ಆರೋಪ ಮಾಡಬೇಕಾಗಿ ಬಂದಿದೆ. ಮಾನ್ಯ ಸಭಾಪತಿಯವರೇ ಇನ್ನೂ ಹೆಚ್ಚಿನ ವಿವರಗಳನ್ನು ನಿಮ್ಮ ಹತ್ತಿರದಲ್ಲಿ ಹೇಳಬೇಕಾಗಿ ಇರುವುದರಿಂದ ೫ ನಿಮಿಷ ಮಾತ್ರ ಹೆಚ್ಚು ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಮೂಲಭೂತವಾಗಿ ಪ್ರಶ್ನೆ ಕೇಳುತ್ತೇನೆ, ಶ್ರೀಮತಿ ನಾಗರತ್ನಮ್ಮನವರು ಕೇಳಿದಹಾಗೆ ಈ ಬಿತ್ತಿ ಪತ್ರಗಳನ್ನು ಹಾಕಬಾರದಾಗಿತ್ತೇ? ಹಾಕಿದ್ದರೆ ತಪ್ಪೇನು ಆಯಿತು. ಒಂದು ರಾಷ್ಟ್ರದ ನಾಯಕರು ಎನ್ನುವ ದೃಷ್ಟಿಯಲ್ಲಿ ಹಾಕುವಂತದ್ದು. ಅದಕ್ಕೆ ಕೊಟ್ಟಂಥ ಕ್ಯಾಪ್ಷನ್ ಏನು ಇದೆ ಇದರ ಬಗ್ಗೆ ಶ್ರೀಮತಿ ನಾಗರತ್ನಮ್ಮನವರು ಈಗಾಗಲೇ ಹೇಳಿದ್ದಾರೆ. ಇನ್ನೊಂದು ಮಾತನ್ನು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ, ಪರಮಪೂಜ್ಯ ಮಹಾತ್ಮ ಗಾಂಧಿಯವರು ಹಾಗೂ ನಮ್ಮ ರಾಷ್ಟ್ರದ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರು ಸಂವಿಧಾನತ್ಮಕವಾಗಿ ತಮ್ಮ ಗೌರವವನ್ನು ಈ ರಾಷ್ಟ್ರದ ನೆಲೆಯಲ್ಲಿ ಸ್ಥಾಪನೆ ಮಾಡಿರುವುದರಿಂದ ಅಂತವರ ಗೌರವಕ್ಕೆ ಸಲ್ಲಿಸಿದಂಥ ಅಪಮಾನವು ಸಹ ಸಂವಿಧಾನಾತ್ಮಕವಾಗಿ ಘೋರ ಅಪರಾಧವಾಗುತ್ತದೆ. ಅದಕ್ಕೆ ಸೂಕ್ತ ಶಿಕ್ಷೆ ಸಂವಿಧಾನದ ಮೂಲಕವೇ ಆಗುತ್ತದೆಂಬುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಈವತ್ತು ತಮ್ಮಲ್ಲಿ ಒತ್ತಾಯ ಮಾಡುವುದು ಇಷ್ಟೆ. ಈ ದುರ್ಘಟನೆಗೆ ಕಾರಣಕರ್ತರಾಗುವುದು ಒಂದು ರೀತಿ ಅಪರಾಧವಾದರೆ ಇನ್ನೊಂದು ಸಂವಿಧಾನಾತ್ಮಕವಾಗಿ ಅಂಥವರ ಗೌರವವನ್ನು ಹಾಳುಮಾಡುವಂಥ ಪ್ರಯತ್ನ ಇನ್ನೊಂದು ಕಡೆ. ಸರ್ವರಿಗೂ ಸಮಪಾಲು ಎಂದು ಭಾಷಣ ಮಾಡತಕ್ಕಂಥ ಪ್ರಯತ್ನ ಒಂದು ಕಡೆ ಆದರೆ ಸಮಪಾಲು ಸಮಬಾಳು ಕೇವಲ ಕೆಲವು ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಈ ಕರ್ನಾಟಕ ರಾಜ್ಯದಲ್ಲಿ ಇದೆ. ಇದೇ ಸಮಪಾಲು ಸಮಬಾಳು ನಮಗೂ ಸಹ ಇದೆಯೇ ಎನ್ನುವ ಪ್ರಶ್ನೆಗೆ ಕರ್ನಾಟಕ ಸರ್ಕಾರದಲ್ಲಿ ಇರತಕ್ಕಂತವರು ಇವತ್ತು ಉತ್ತರವನ್ನು ಕೊಡಬೇಕಾಗಿದೆ. ಒಂದು ಕಡೆ ಗಾಂಧೀಜಿಯವರನ್ನು ಪೂಜ್ಯ ಗಾಂಧಿ ಜಿ ಎಂದು ಹೇಳಿ, ಇನ್ನೊಂದು ಕಡೆ ಗಾಂಧೀಜಿಯವರ ಚಿತ್ರವನ್ನು ನೆಲಕ್ಕೆ ಹಾಕಿ ಪೋಲೀಸ್‌ನವರ ಬೂಟಿನಲ್ಲಿ ಒದೆಸುವಂಥ ಪರಿಸ್ಥಿತಿಯಾಗಿದೆ. ಇಲ್ಲಿ ಒಂದು ಗೌರವದ ಮೇಲೆ ಧಾಳಿಯಾದರೆ ಇನ್ನೊಂದು ಕಡೆ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಕೂಡ ಇಲ್ಲಿ ಬರುತ್ತದೆ. ಅಭಿವ್ಯಕ್ತಿ ಸ್ವಾತಂತ್ರಕ್ಕಾಗಿ ಹೋರಾಡಿದಂಥ ಜನ ನಾವು. ಅಭಿವ್ಯಕ್ತಿ ಸ್ವಾತಂತ್ರಕ್ಕಾಗಿ ಜೈಲಿಗೆ ಹೋದಂಥ ಜನ ನಾವು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಬಾಯಿಗೆ ಬಟ್ಟೆ ಕಟ್ಟಿ ಬೇರೆ ಬೇರೆ ಯವರ ಭಾಷಣಕ್ಕೆ ಪ್ರತಿಭಟನೆ ಮಾಡಿದಂಥ ಜನ ನಾವು. ನಾವು ಬೇರೆ ಬೇರೆ ಹೋರಾಟದ ಹಿನ್ನೆಲೆಯಲ್ಲಿ ನಾವು ಈವತ್ತು ಇದ್ದೇವೆಂದು ಹೇಳಿಕೊಳ್ಳತಕ್ಕಂಥ ಜನ ಇವತ್ತು ಇನ್ನೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ತರುತ್ತಾರೆಂದು ಹೇಳಿದರೆ, ಅಡ್ಡಿ ತರತಕ್ಕಂಥ ವ್ಯಕ್ತಿಗಳ ನೈತಿಕ ಮಟ್ಟವನ್ನು ಕರ್ನಾಟಕದಲ್ಲಿ ಈವತ್ತು ಪ್ರಶ್ನೆ ಮಾಡಬೇಕಾಗಿದೆ, ನಾವು ಏನು ಮಾಡಿಲ್ಲವೆಂದು ಹೇಳುವ ಹೇಳಿಕೆಯನ್ನು ಈವತ್ತು ಯಾವುದೋ ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ನೋಡಿದ್ದೇವೆ. ಮಾಡಿಲ್ಲವೆಂದು ಹೇಳುವುದು ಒಬ್ಬಿಬ್ಬರ ಹೇಳಿಕೆ ಆಗಬಾರದು. ನೂರಾರು, ಸಾವಿರಾರು ಮಂದಿ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯತ್‌ಗೆ ಜವಾಬ್ದಾರಿಯುತವಾಗಿ ಆಯ್ಕೆಯಾಗಿ ಬಂದಂಥ ವ್ಯಕ್ತಿಗಳ ಎದುರಿನಲ್ಲೇ ಇದು ಆಗಿದೆ ಎಂದರೆ ಈವತ್ತು ನಿಮ್ಮ ತೂಕ ಮತ್ತು ತಮ್ಮ ನೈತಿಕ ಮಟ್ಟವನ್ನು ಕರ್ನಾಟಕ ರಾಜ್ಯದಲ್ಲಿ ಯಾವ ಪಕ್ಷ ಭೇಧವಿಲ್ಲದೆ ಸದಸ್ಯರು ತೀರ್ಮಾನ ಮಾಡುವುದರಲ್ಲಿ ಯಾವ ರೀತಿಯಾದ ಅನುಮಾನವೂ ಇಲ್ಲ. ಈ ಘಟನೆ ಮನಸ್ಸಿಗೆ ದುಃಖ ತರುವಂಥದ್ದು. ನಮ್ಮ ಮಹಾನ್ ವ್ಯಕ್ತಿಗಳಿಗೆ ತೀವ್ರವಾದ ಅಗೌರವ ಸಲ್ಲಿಸಿದಂಥ ಘಟನೆ ಏನಿದೆ ಇದರ ಬಗ್ಗೆ ಒಂದು ನಿಷ್ಪಕ್ಷಪಾತವಾದ ತನಿಖೆ ಅತ್ಯಂತ ಅಗತ್ಯ ಇದೆ. ಈ ತನಿಖೆ ಆಗಬೇಕು, ಯಾರು ಅಪರಾಧ ಎಸಗಿದ್ದಾರೆ ಅವರಿಗೆ ಸೂಕ್ತ ಹಾಗೂ ಕಠಿಣವಾದ ಶಿಕ್ಷೆ ಆಗಬೇಕು. ಆ ಕೃತ್ಯವನ್ನು ಮಾಡಿದ ವ್ಯಕ್ತಿಗಳು ಪೋಲೀಸ್ ಅಧಿಕಾರಿಗಳು ಇರಬಹುದು, ರಾಜಕಾರಣಿಗಳು ಇರಬಹುದು, ಅವರಿಗೆ ಶಿಕ್ಷೆ ಆಗಲೇಬೇಕು, ನಿಷ್ಪಕ್ಷಪಾತವಾದ ತನಿಖೆಯಾಗಿ ಆ ಮೂಲಕ ಶಿಕ್ಷೆಯ ಘೋಷಣೆ ಆಗಬೇಕು. ಪಕ್ಷ ಭೇಧ ಇಲ್ಲದೆ ಸದಸ್ಯರನ್ನೊಡಗೂಡಿದ ಒಂದು ಉನ್ನತ ಮಟ್ಟದ ಸಮಿತಿಯನ್ನು ರೂಪಿಸಿ ಆ ಸಮಿತಿಯ ಮೂಲಕ ವಿಚಾರಣೆ ಆಗಲಿ. ಆ ಸಮಿತಿ ಕೊಟ್ಟ ವರದಿಯ ಮೇರೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ।। ಜೀವರಾಜ ಆಳ್ವ.—ನಾನು ಸ್ಪಷ್ಟೀಕರಣ ಕೊಟ್ಟಮೇಲೆ ಮಾನ್ಯ ಸದಸ್ಯರು ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿದ ನಂತರ ಕೊಡಬಹುದು.

(ಗೊಂದಲ)

ಅಧ್ಯಕ್ಷರು.—ಅವರದ್ದು ಆದಕೂಡಲೇ ನೀವು ಹೇಳಿ. ಅವರು ಏನು ಹೇಳುತ್ತಾರೆ ನೋಡೋಣ ಅದರಿಂದ ನಿಮಗೆ ಅನುಕೂಲವಾಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮ್ಮನೆ ಏತಕ್ಕೆ ನೋಡಬೇಕು ?

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಹೇಳಲಿ.

ಡಾ॥ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೆ, ಮಾನ್ಯ ಉಮರಬ್ಬನವರು ಕೆಲವು ಮಾತುಗಳನ್ನು ನಿಜವಾಗಿ ಹೇಳಿದ್ದಾರೆ. ಸಭಾಂಗಣದಲ್ಲಿ ಸಭೆ ನಡೆಯುತ್ತಿರುವಾಗ ಅವರ ಹತ್ತಿರ ಮಾತನಾಡಿದ್ದು ನಿಜ. ಬಿತ್ತಿಚಿತ್ರಗಳ ಚಿತಾವಣೆ ಆದದ್ದನ್ನು ಮಾಜಿ ಮಂತ್ರಿಗಳು ನೋಡಿದರು ಎಂದರು. ಬಿತ್ತಿ ಚಿತ್ರಗಳನ್ನು ನಾನು ನೋಡಲಿಲ್ಲ. ಹತ್ತು ಗಂಟೆ ಸಮಯಕ್ಕೆ ಸಭಾಂಗಣಕ್ಕೆ ಹೋದಾಗ, ಅಲ್ಲಿ ತಿಳಿಯಿತು, ಕಾಂಗ್ರೆಸ್ ಪಕ್ಷದವರು ಪಕ್ಷದ ವತಿಯಿಂದ ಬಿತ್ತಿ ಚಿತ್ರ ಹಾಕಿದ್ದರು. ಅದು ಪಕ್ಷದ ಘೋಷಣೆಯಿಂದ ಕೂಡಿತ್ತು, ಅದನ್ನು ತೆಗೆಸಿದರು ಎಂದು. ಆಗ ನನ್ನ ಮನಸ್ಸಿಗೆ ಅನ್ನಿಸಿತು, ಈ ಸಮಯದಲ್ಲಿ ಇಷ್ಟು ದೊಡ್ಡ ಸಮಾವೇಶ ಆಗಿರುವಾಗ ತೊಂದರೆಯಾದರೆ ಕಷ್ಟ ಎಂಬ ಭಾವನೆ ಬಂತು. ನಂತರ ಅಲ್ಲೇ ಕೆಳಗೆ ಬಂದೆ. ಅಲ್ಲಿ ಊಟದ ವ್ಯವಸ್ಥೆ ಇತ್ತು. ಊಟದ ವ್ಯವಸ್ಥೆ ಬಗ್ಗೆ ಅಧಿಕಾರಿಗಳು ಹೇಳಿದರು, ದಯವಿಟ್ಟು ಒಂದೂವರೆ ಗಂಟೆಯವರೆಗೆ ಸಭೆಯನ್ನು ನಡೆಸಲಿಕ್ಕೆ ಹೇಳಿ, ಇಲ್ಲದಿದ್ದರೆ ೯೦ ಬೂತಗಳನ್ನು ಏನು ಮಾಡಿದ್ದೇವೆ ಅದನ್ನು ಕವರ್ ಮಾಡಲಿಕ್ಕೆ ಆಗುವುದಿಲ್ಲ, ಅರ್ಧ ಗಂಟೆಗಳಲ್ಲಿ ೫ ಬೂತ್‌ಗಳನ್ನು ಮಾತ್ರ ಕವರ್ ಮಾಡಲಿಕ್ಕೆ ಆಗಿದೆ ಎಂದು. ಮಾತನ್ನು ಸ್ವಲ್ಪ ದೀರ್ಘವಾಗಿ ಬೆಳೆಸಲಿ, ಒಂದುಗಂಟೆಗೆ ಮುಗಿಸಿದರೆ ತೊಂದರೆಯಾಗುತ್ತದೆಂದು ಹೇಳಿದರು. ಆಗ ಪ್ರಥಮ ಬಾರಿಗೆ ಮುಖ್ಯ ಮಂತ್ರಿಗಳಿಗೆ ತಿಳಿಸೋಣವೆಂದು ವೇದಿಕೆ ಮೇಲೆ ಬಂದೆ. ಉಮರಬ್ಬ ಹೇಳಿದರು, ಕಾಂಗ್ರೆಸ್ ಪಕ್ಷದ ಬಿತ್ತಿ ಪತ್ರಗಳನ್ನೆಲ್ಲ ತೆಗೆದು ಹಾಕಿದ್ದಾರೆ. ಅದೇ ರೀತಿ ಹೆಗಡೆಯವರನ್ನೂ ತೆಗೆದುಹಾಕಬಹುದಿತ್ತು, ಸರ್ಕಾರ ನಡೆಸುವಂಥ ಸಮಾವೇಶದಲ್ಲಿ ಹೆಗಡೆಯವರದ್ದು ಇರಬಾರದಾಗಿತ್ತು ಎಂದು ನಾನು ಎಂದು ನಾನು ಪ್ರತಿಭಟನೆ ಮಾಡುತ್ತೇನೆಂದು ಉಮರಬ್ಬನವರು ಹೇಳಿದರು. ಇದು ಬಹಳ ದೊಡ್ಡ ಸಮಾವೇಶ, ಅದರ ಬಗ್ಗೆ ಖುದ್ದು ಮಾತನಾಡೋಣ, ಉದ್ರೇಕಗೊಳ್ಳಬೇಡಿ. ಯಾವುದೇ ದುರ್ಘಟನೆಗೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ ಎಂದು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆಂದು ಹೇಳಿ ಕೆಳಗೆ ಇಳಿದು ಬಂದೆ. ಇದು ನಡೆದ ಸಂಗತಿ. ಇದಕ್ಕಿಂತ ಹೆಚ್ಚೇನು ನನಗೆ ತಿಳಿದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಕೆಲವು ವಿಚಾರಗಳನ್ನು ತಮ್ಮ ಎದುರಿಗೆ ಇಟ್ಟಿದ್ದಾರೆ ಮತ್ತು ಉಮರಬ್ಬ ಇವರೂ ಕೂಡ ಸವಿಸ್ತಾರವಾಗಿ ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಮೊನ್ನೆ ೩೧ ರಂದು ಸರ್ಕಾರದ ವತಿಯಿಂದ ದೊಡ್ಡ ಸಭೆಯನ್ನು ಸೇರಿಸಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಸದಸ್ಯರನ್ನು ನಾಡಿನ ಮೂಲೆ ಮೂಲೆಯಿಂದ ಕರೆಸಿ ಅದ್ದೂರಿ ಸಭೆಯನ್ನು ನಡೆಸಿದರು.

ಬಳ್ಳಾರಿ ರಸ್ತೆ ಮುಖ್ಯರಸ್ತೆಯಲ್ಲಿ ಹಾಕಿದಂಥ ಸುಮಾರು ನಾಲ್ಕು ಕಟ್ ಔಟ್ ಏನು ಇದ್ದವು ಅವುಗಳಲ್ಲಿ ಪಕ್ಷಕ್ಕೆ ಸಂಬಂಧಪಟ್ಟ ಸ್ಲೋಗಾನ್ಸ್ ಆಗಲಿ ಅಥವಾ ಫ್ಲಾಗ್ ಆಗಲೀ ಹಚ್ಚಿ ಒಂದು ಪಕ್ಷದ ಪ್ರಚಾರವನ್ನು ಪಡೆಯಬೇಕು ಎಂದು ಮಾಡಿಲ್ಲ. ಪರಮ ಪೂಜ್ಯ ಮಹಾತ್ಮ ಗಾಂಧೀಜಿಯವರು ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ದೇಶದಲ್ಲಿರತಕ್ಕ ಜನರನ್ನು ಗುಲಾಮಗಿರಿಯಿಂದ ಮುಕ್ತರನ್ನಾಗಿ ಏನು ಮಾಡಿದ್ದಾರೆ, ಈ ದೇಶದಲ್ಲಿ ಪಂಚಾಯತ್‌ರಾಜ್ಯ ವ್ಯವಸ್ಥೆ ಬರಬೇಕು, ಗ್ರಾಮರಾಜ್ಯ ಆಗಬೇಕು, ರಾಮರಾಜ್ಯ ಆಗಬೇಕು ಎಂದು ಪ್ರಚಾರ ಮಾಡಿ ಅದಕ್ಕಾಗಿ ಶ್ರಮಿಸಿದಂಥ ಪೂಜ್ಯರಾದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಫೋಟೊ ಅಲ್ಲಿತ್ತು. ಅದೇರೀತಿಯಾಗಿ ಈ ದೇಶದ ಪ್ರಥಮ ಪ್ರಧಾನಿಯಾಗಿದ್ದಂಥ ಪಂಡಿತ್ ಜವಾಹರಲಾಲ್ ನೆಹರೂ ಅವರ ಫೋಟೊ ಅಲ್ಲಿತ್ತು. ಆ ಮೀಟಿಂಗ್‌ನಲ್ಲಿ ಪದೇಪದೇ ಶ್ರೀಮಾನ್ ಎಸ್. ಕೆ. ಡೇ ಅವರು ಹೇಳುತ್ತಿದ್ದರು, ಈ ಪಂಚಾಯತ್‌ರಾಜ್ಯ ವ್ಯವಸ್ಥೆ ದೇಶದಲ್ಲಿ ಬರಬೇಕಾಗಿದ್ದರೆ ಪಂಡಿತ್‌ನೆಹರೂಜಿ ಅವರೇ ಕಾರಣ, ಅವರೇ ನನಗೆ ಪ್ರೋತ್ಸಾಹ ಮಾಡಿದರು, ಅವರ ಮಂತ್ರಿಮಂಡಲದಲ್ಲಿ ನಾನು ಕೆಲಸ ಮಾಡಿದ್ದೇನೆ, ಮತ್ತು ಅವರ ಬೆಂಬಲದಿಂದ ಈ ಪಂಚಾಯತ್‌ರಾಜ್ಯ ವ್ಯವಸ್ಥೆಯನ್ನು ಈ ದೇಶದಲ್ಲಿ ತಂದಿದ್ದೇವೆ ಎಂಬ ಮಾತನ್ನು ಹತ್ತಾರುಸಾರಿ ಪಂಡಿತ್ ನೆಹರೂ ಅವರ ಹೆಸರನ್ನು ತೆಗೆದುಕೊಂಡು ಹೇಳಿದರು. ಈ ದೇಶದ ಸ್ವಾತಂತ್ರ್ಯಕ್ಕಾಗಿ

ಹೋರಾಟ ಮಾಡಿದಂಥ ಪ್ರಥಮ ಪ್ರಧಾನ ಮಂತ್ರಿಯಾಗಿ ದೇಶಕ್ಕೆ ಸೇವೆ ಸಲ್ಲಿಸಿದಂಥ ಪಂಡಿತ್ ಜವರಲ್ ನೆಹರು ಅವರ ಚಿತ್ರ ಕೂಡ ಅಲ್ಲಿತ್ತು. ಜೊತೆಯಲ್ಲಿ ಸುಮಾರು ೧೮ ತಿಂಗಳು ಈ ದೇಶದಲ್ಲಿ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿ ಪ್ರಾಮಾಣಿಕತೆಯಿಂದ ದಕ್ಷತೆಯಿಂದ ದೇಶವನ್ನು ನಡೆಸಿದ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಕಟ್‌ಔಟ್ ಕೂಡ ಅಲ್ಲಿತ್ತು. ಅದೇರೀತಿಯಾಗಿ ಈ ದೇಶದ ಐಕ್ಯತೆಗಾಗಿ, ಸಮಗ್ರತೆಗಾಗಿ ಬಡವರ ಏಳಿಗೆಗಾಗಿ ಹೋರಾಟ ಮಾಡಿದ್ದಂಥ ಶ್ರೀಮತಿ ಇಂದಿರಾ ಗಾಂಧೀಜಿಯವರ ಕಟ್ ಔಟ್ ಕೂಡ ಅಲ್ಲಿತ್ತು. ತದನಂತರ ಪ್ರಧಾನಮಂತ್ರಿಗಳಾಗಿರುವ ನಮ್ಮ ನೆಚ್ಚಿನ ನಾಯಕರ ಭಾವಚಿತ್ರ, ಕಟ್ ಔಟ್ ಕೂಡ ಅಲ್ಲಿ ಹಚ್ಚಿದ್ದರು. ಇದನ್ನು ಹಚ್ಚತಕ್ಕ ಉದ್ದೇಶ ಏನೆಂದರೆ ಹಳ್ಳಿಯಿಂದ ಬರತಕ್ಕ ಜನರಿಗೆ ಗೊತ್ತಾಗಲಿ, ಆ ಚಿತ್ರಗಳನ್ನು ನೋಡಿ ಅವರಿಗೆ ಒಂದು ಪ್ರೇರಣೆ ಬರಲಿ, ಹಿಂದೆ ಯಾವರೀತಿಯಾಗಿ ಈ ಪಂಚಾಯತ್ ರಾಜ್ಯಕ್ಕಾಗಲೀ ಅಥವಾ ದೇಶಕ್ಕಾಗಲೀ ಹೋರಾಟ ಮಾಡಿ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿದ್ದಾರೆ ಪ್ರಜಾಪ್ರಭುತ್ವವನ್ನು ತಂದು ಕೊಟ್ಟಿದ್ದಾರೆ ಮತ್ತು ದೇಶಕ್ಕೆ ಸ್ವಾತಂತ್ರ್ಯ ಮಾಡಿಕೊಟ್ಟಿದ್ದಾರೆ ಎಂಬ ಸ್ಮರಣೆ, ನೆನಪು ಬರಲಿ ಎಂಬ ದೃಷ್ಟಿಯಿಂದ ಆ ಕಟ್‌ಔಟ್ ಹಚ್ಚಿ ಅದರ ಕೆಳಗೆ ಈಗಾಗಲೇ ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಸಂಬಂಧಪಟ್ಟ ಸ್ಲೋಗನ್ಸ್ ಕೂಡ ಬರೆದಿದ್ದರು ಬೇರೆ ಪಕ್ಷದ ಸ್ಲೋಗಾನ್ಸ್ ಅಲ್ಲಿರಲಿಲ್ಲ. ಅಥವಾ ಪಕ್ಷದ ಕಾರ್ಯಕ್ರಮ ಹಾಕಿ ಪ್ರಚಾರ ಪಡೆಯುವ ಉದ್ದೇಶವೂ ಇರಲಿಲ್ಲ. ಆದರೆ ಅದನ್ನು ಸಹಿಸದೆ ಈಗಾಗಲೇ ಶ್ರೀಮಾನ್ ಉಮರಬ್ಬ ಅವರು ಹೇಳಿದಹಾಗೆ ನನಗನ್ನಿಸುತ್ತದೆ ಇದು ಸರ್ಕಾರದ ಬೆಂಬಲ ಇಲ್ಲದೆ ಈ ಕೆಲಸ ಆಗಲಿಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಇವತ್ತಿನ ದಿವಸ ಹೇಳುತ್ತೇನೆ. ಕೇವಲ ಪೋಲಿಸರು ಮಾಡತಕ್ಕ ಕೆಲಸ ಅಲ್ಲ. ಯಾವ ಪೋಲೀಸರಿಗೆ ಆ ಧೈರ್ಯ ಇದೆ ? ಮಹಾತ್ಮ ಗಾಂಧೀಜಿಯವರ ಫೋಟೊ ಕೀಳಬೇಕು, ಹರಿದುಹಾಕಬೇಕು ಎಂಬ ಧೈರ್ಯ ಪೋಲೀಸರ ಹತ್ತಿರ ಬರುತ್ತದಾ ? ಪ್ರಧಾನಮಂತ್ರಿ ರಾಜೀವ್ ಗಾಂಧಿಯವರ ಫೋಟೊ ಹರಿಯಬೇಕು ಎಂಬ ಧೈರ್ಯ ಬರುತ್ತದಾ ? ಶ್ರೀಮತಿ ಇಂದಿರಾಗಾಂಧಿಯವರ ಫೋಟೊ ಹರಿಯಬೇಕು ಎಂಬ ಧೈರ್ಯ ಬರುತ್ತದಾ ? ಈ ಧೈರ್ಯ ಯಾವ ಪೋಲೀಸರಿಗಾಗಲೀ ಡಿವಿಷನಲ್ ಕಮಿಷನರ್‌ಗಾಗಲೀ ಬರುತ್ತದಾ ? ನನಗನ್ನಿಸುತ್ತದೆ ಈ ಈ ಧೈಯ ತುಂಬಿದವರು, ಈಗಾಗಲೇ ಹೆಸರು ಹೇಳಿದ್ದಾರೆ, ನಾನು ಪುನಃ ಉಚ್ಚಾರ ಮಾಡುತ್ತೇನೆ, ಶ್ರೀಮಾನ್ ಜಿವರಾಜ ಆಳ್ವ, ಎಕ್ಸ್–ಮಿನಿಸ್ಟರ್ ಅವರು ಅಲ್ಲಿ ನಿಂತು ಮಾಡಿಸಿದ್ದಾರೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ.

೧–೩೦ ಪಿ. ಎಂ.

ಶ್ರೀ ಎಂ. ರಘುಪತಿ.—ಐ ಹಾವ್ ಅನ್ ಎ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ವೇಳೆ......

ಶ್ರೀ ವೇದಾಂತ ಹೆಮ್ಮಿಗೆ.—ಪದೇ ಪದೇ ಅವರ ಹೆಸರನ್ನು ಹೇಳತಕ್ಕಂತಹದ್ದು ಸರಿಯಲ್ಲ.

ಶ್ರೀ ಎಂ. ರಘುಪತಿ.—ಸದನದ ನಿಯಮಾವಳಿಗಳ ಪ್ರಕಾರ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ಮೇಲೆ ಆಪಾದನೆ ಮಾಡುವುದಿದ್ದರೆ ಏಕ್‌ದಮ್ ಮಾಡುವ ಹಾಗೆ ಇಲ್ಲ. ಅಧ್ಯಕ್ಷರಿಗೆ ಮೊದಲು ಬರವಣಿಗೆಯಲ್ಲಿ ಇಂತಹ ಸದಸ್ಯರು ಈ ರೀತಿಯ ತಪ್ಪು ಮಾಡಿದ್ದಾರೆ, ಅದಕ್ಕಾಗಿ ನಾನು ಅವರ ಮೇಲೆ ಆಪಾದನೆ ಮಾಡುತ್ತಿದ್ದೇನೆ, ಅದಕ್ಕೆ ತಾವು ಅಪ್ಪಣೆ ಕೊಡಬೇಕೆಂದು ಬರೆದು ತಿಳಿಸಬೇಕು. ಒಂದೊಂದು ನಿಯಮಕ್ಕೆ ಒಂದೊಂದು ನಿಯಮಾವಳಿಗಳು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳಿದ್ದೂ ಆಯಿತು. ಅದಕ್ಕವರು ಉತ್ತರ ಕೊಟ್ಟಿದ್ದೂ ಆಯಿತು.

ಶ್ರೀ ಎಂ. ರಘುಪತಿ.—ಶ್ರೀಮಾನ್ ಉಮರಬ್ಬನವರು ರೆಫರೆನ್ಸ್‌ಗೆ ಹೇಳಿದರು. ಅದಕ್ಕೆ ಸಂಬಂಧಪಟ್ಟ ಸದಸ್ಯರು ಉತ್ತರ ಹೇಳಿದ್ದಾರೆ. ಆದರೆ ಪುನಃ ಅವರ ಬಗ್ಗೆ ಆಪಾದನೆ ಮಾಡುವುದಿದ್ದರೆ ಮೊದಲು ಬರವಣಿಗೆಯಲ್ಲಿ ಕೊಡಬೇಕು.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಪಾಟೀಲರೇ ರೂಲ್ಸ್ ಏನು ಹೇಳುತ್ತದೆ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

ಶ್ರೀ ಎಂ. ರಘುಪತಿ.—ದಯವಿಟ್ಟು ಸಹಕಾರ ಕೊಡಬೇಕು. ಶ್ರೀಮಾನ್ ಬಂಗಾರಪ್ಪನವರು ಹಿರಿಯ ಸದಸ್ಯರು. ಬಂಗಾರಪ್ಪನವರು ಆಪಾದನೆ ಮಾಡುವ ಹಾಗೆ ಇದ್ದರೆ ಮೊದಲು ಬರವಣಿಗೆಯಲ್ಲಿ ಕೊಡಬೇಕು. ಇದು ಪಾರ್ಲಿಮೆಂಟ್‌ನಲ್ಲೂ ನಡೆದು ಬಂದ ಸಂಪ್ರದಾಯ. ಇಲ್ಲೂ ಕೂಡ ಹತ್ತಾರು ವರ್ಷಗಳಿಂದ ನಿಯಮಾವಳಿಗಳನ್ನು ಪಾಲನೆ ಮಾಡಿಕೊಂಡು ಬಂದಿದ್ದೇವೆ. ಶ್ರೀಮಾನ್ ಜೀವರಾಜಆಳ್ವಾರವರ ಹೆಸರನ್ನು ಪದೇ ಪದೇ ಬಳಸುವುದು ಸರಿಯಲ್ಲ. ಈ ಬಗ್ಗೆ ತಾವು ನಿರ್ಣಯವನ್ನು ಕೊಡಬೇಕು. ಮಾನ್ಯ ಸದಸ್ಯರು ಡಾ।। ಜೀವರಾಜ ಆಳ್ವರವರ ಹೆಸರನ್ನು ಏನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು.—ಶ್ರೀಮಾನ್ ಬಂಗಾರಪ್ಪನವರೇ ತಾವು ರೂಲ್ಸನ್ನು ನೋಡಿ.

ಶ್ರೀ ಎಸ್. ಬಂಗಾರಪ್ಪ.—ರೂಲ್ಸನ್ನು ನೋಡುವುದಕ್ಕೆ ತಾವು ಶ್ರೀಮಾನ್ ಕೆ. ಹೆಚ್. ಪಾಟೀಲ್‌ರಿಗೆ ಹೇಳಿದ್ದೀರಿ. ಅವರು ಅದನು ನೋಡುತ್ತಾರೆ. ಅರಾಕ್ ಬಾಟ್ಲಿಂಗ್ ಕಾಂಟ್ರಾಕ್ಟ್ ವಿಚಾರ ಬಂದಾಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನನ್ನ ಮೇಲೆ ಆಪಾದನೆ ಮಾಡಿದರು. ನಾನು ಅವರ ಮೇಲೆ ಆಪಾದನೆ ಮಾಡಿದೆ. ಅವಾಗ ಅದಕ್ಕೆಲ್ಲಾ ನಾವಿಬ್ಬರೂ ಬರೆದುಕೊಟ್ಟಿರಲಿಲ್ಲ ಆದರೂ ಅಧ್ಯಕ್ಷರು ಅದನ್ನು ಅಡ್ಮಿಟ್ ಮಾಡಿದರು, ಚರ್ಚೆಗೆ ಅವಕಾಶ ಮಾಡಿಕೊಟ್ಟರು.

ಶ್ರೀ ಎಂ. ರಘುಪತಿ.—ಎರಡೂ ಇವೆ. ಅಧ್ಯಕ್ಷರು ತಮ್ಮ ವಿವೇಚನೆಯನ್ನು ಉಪಯೋಗಿಸಿ ತಾವು ಆ ಬಗ್ಗೆ ನಿರ್ಣಯವನ್ನು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಷ್ಟನ್ನು ಹೇಳಿ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟು ಆಪಾದನೆ ಮಾಡಬೇಕು ಅಂತ ಇದ್ದರೆ ಅದರಂತೆ ಮಾಡಿ.

ಶ್ರೀ ವೇದಾಂತ ಹೆಮ್ಮಿಗೆ.—ಈ ಸದನದಲ್ಲಿ ಯಾರ ಮೇಲೆ ಯಾರು ಬೇಕಾದರೂ ಆಪಾದನೆ ಮಾಡಬಹುದು ಅಂತ ಇದೆಯೋ ? ಅದನ್ನಾದರೂ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅದನ್ನೂ ಹುಡುಕುತ್ತಾರೆ.

ಶ್ರೀ ಎಂ. ರಘುಪತಿ.—ನನ್ನ ಹತ್ತಿರ ರೂಲ್ಸ್ ಬುಕ್ಕು ಇಲ್ಲ. ಆ ಬಗ್ಗೆ ಈ ಸದನದಲ್ಲಿ ಹಲವಾರು ಸಂದರ್ಭಗಳಲ್ಲಿ ಅಧ್ಯಕ್ಷರು ನಿರ್ಣಯವನ್ನು ಕೊಟ್ಟಿದ್ದಾರೆ. ಯಾರೇ ಆಗಿರಲಿ ಸದಸ್ಯರ ಮೇಲೆ ಮತ್ತೊಬ್ಬ ಸದಸ್ಯರು ಆಪಾದನೆ ಮಾಡಿದಾಗ ಸಂಬಂಧಪಟ್ಟ ಸದಸ್ಯರು ಬರೆದುಕೊಡಬೇಕು. ನಂತರ ಆಪಾದನೆ ಮಾಡಬೇಕೆಂದು ಇದೆ. ನಾನು ರೂಲ್ಸ್ ಬುಕ್ಕು ತಂದಿದ್ದರೆ ಅದನ್ನು ಕೋಟ್ ಮಾಡಿಯೇ ಹೇಳುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ನಿಯಮಾವಳಿಗಳ ಪ್ರಕಾರ ಬರೆದು ಕೊಡಬೇಕು ಎನ್ನತಕ್ಕಂತಹ ವಿಚಾರ ಅಲ್ಲಿದೆ. ಅದು ಗ್ಯಾರಂಟಿಯಾಗಿ ಗೊತ್ತಿದೆ.

ಅಧ್ಯಕ್ಷರು.—ರೂಲ್ಸ್‌ನಲ್ಲಿ ನೋಟೀಸ್ ಕೊಡಬೇಕು ಅಂತ ಇದ್ದರೆ ಈಗಲೇ ಕೊಟ್ಟುಬಿಡಿ. ರೂಲ್ಸ್ ಬಿಟ್ಟು ಹೋಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಅವಕಾಶ ಕೊಟ್ಟಾಗ......

ಅಧ್ಯಕ್ಷರು.—ನೋಟೀಸ್ ಕೊಡಬೇಕು ಅಂತ ಇದ್ದರೆ ನೋಟೀಸ್ ಕೊಟ್ಟೇ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ಸ್ ಇದೆ ಅಂತ ಹೇಳಿದಮೇಲೆ ಅದಕ್ಕೆ ತಲೆಬಾಗುತ್ತೇವೆ. ಆದರೆ ಈಗಾಗಲೇ ಶ್ರೀಮಾನ್ ಉಮರಬ್ಬನವರು ಅವರು ಹೆಸರನ್ನು ತೆಗೆದುಕೊಂಡಾಗ ಆ ರೀತಿಯಾದ ಚರ್ಚೆ ಮಾಡಿದ್ದೇವೆಂದು ಅವರೇ ಒಪ್ಪಿಕೊಂಡಿದ್ದಾರೆ. ಅವರು ಆ ರೀತಿ ಒಪ್ಪಿಕೊಳ್ಳದಿದ್ದರೆ ನಾನು ಬರೆದುಕೊಡಬಹುದಾಗಿತ್ತು. ಚರ್ಚೆ ನಡೆಯುತ್ತಿತ್ತು ನಾನೂ ಹೋಗಿದ್ದೆ ಅಂತ ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಸದಸ್ಯರು ಆ ಬಗ್ಗೆ ವಿವರಣೆಯನ್ನು ನೀಡಿದ ಮೇಲೆ ಪುನಃ ಅದನ್ನೇ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ಆ ಬಗ್ಗೆ ಆಪಾದನೆ ಮಾಡುವುದು ಇದ್ದರೆ ಬರವಣಿಗೆಯಲ್ಲಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಶ್ರೀಮಾನ್ ರಘುಪತಿಯವರು ಎತ್ತಿದಂತಹ ಪಾಯಿಂಟ್ ಆಫ್ ಆರ್ಡರ ಯೋಗ್ಯವಾದುದಾಗಿದೆ. ನೋಟೀಸ್ ಕೊಟ್ಟೇ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿಯಾಗಿ ಮಂಡಲಪಂಚಾಯಿತ್ತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ೨೭ ಸಾವಿರ ಜನ ಒಂದು ಪಕ್ಷದವರು ಆಯ್ಕೆಯಾಗಿದ್ದು ಮತ್ತೆ ೨೭ ಸಾವಿರ ಜನ ವಿರೋಧ ಪಕ್ಷದವರು ಆಯ್ಕೆಯಾಗಿದ್ದಾರೆ. ಅವರು ಕಾಂಗ್ರೆಸ್ ನವರೇ ಇರಬಹುದು ಅಥವಾ ಇಂಡಿಪೆಂಡೆಂಟ್ಸ್ ಇರಬಹುದು. ಆದರೆ ನಿಮಗೆ ಸಮಸಮವಾಗಿರತಕ್ಕ ಸಂಖ್ಯೆಯಲ್ಲೇ ಇವರೂ ಇದ್ದರು. ಒಂದು ವೇಳೆ ಮಹಾತ್ಮಾ ಗಾಂಧಿಯವರ, ಇಂದಿರಾಗಾಂಧಿಯವರ ಹಾಗೂ ಪ್ರಧಾನಮಂತ್ರಿಗಳವರ ಚಿತ್ರವನ್ನು ಇವರೇ ಕಿತ್ತುಹಾಕಿದ್ದಾರೆಂದು ಜನರಿಗೆ ಪ್ರಚೋದನೆ ಕೊಟ್ಟು ಹೇಳಿದ್ದರೆ ಗತಿ ಏನಾಗುತ್ತಾ ಇತ್ತು ? ಅಲ್ಲಿ ೫೭ ಸಾವಿರ ಜನ ಹೊಡೆದಾಡುತ್ತಿದ್ದರು.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಈ ಚುನಾವಣೆ ಮಾಡಿ ಕಾಂಗ್ರೆಸ್ ಪಕ್ಷದವರಿಗೆ ಜನತಾ ಪಕ್ಷದವರು ಜೀವ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮಂತಹವರ ಚಿತಾವಣೆಯಿಂದಲೇ ಮೈಸೂರಿನಲ್ಲಿ ಬೆಂಕಿ ಹತ್ತಿದ್ದು. ಈ ಬಗ್ಗೆ ಸಂಬಂಧಪಟ್ಟವರಿಗೆ ಕೇಳೋಣ. ತಾವು ಸಮಾಧಾನವಾಗಿ ಇರಿ ಎಂದು ಬಹಳ ಜನರಿಗೆ ನಮ್ಮ ಅಧ್ಯಕ್ಷರು ಸಮಾಧಾನ ಮಾಡಿ ಕಳುಹಿಸಿದರು. ನಿಮ್ಮ ಹಾಗೆ ಚಿತಾವಣೆ ಮಾಡಿದ್ದರೆ ದೊಡ್ಡ ಗಲಾಟೆಯಾಗುತ್ತಿತ್ತು.

ಅಧ್ಯಕ್ಷರು.—ಅಲ್ಲಿ ಯಾರು ಮಾಡಿದ್ದೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೋಲೀಸಿನವರನ್ನು ಅಲ್ಲಿಗೆ ಕರೆದಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪಕ್ಷದ ಪ್ರಚೋದನೆ ಅಲ್ಲಿ ಇರಲಿಲ್ಲ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂಡಿ. ಯಾರು ಬೇಕಾದರೂ ಮಾತನಾಡಿದರೆ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಕ್ಷದ ಪ್ರಚಾರ ಮಾಡುವುದಕ್ಕೆ ಬೇರೆ ಫೋರಮ್ ಇದೆ. ಅಲ್ಲಿ ಮಾಡೋಣ. ಆದರೆ ಅದನ್ನು ಬಿಟ್ಟು ಪೋಲೀಸಿನವರಿಗೆ ಹೇಳಿ ಗಾಂಧೀಜಿಯವರ ಟ್ಯಾಬ್ಲೂವನ್ನು ಜವಹರಲಾಲ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ ಹಾಗೂ ಪ್ರಧಾನ ಮಂತ್ರಿಗಳು ಮತ್ತು ಶ್ರೀಮತಿ ಇಂದಿರಾಗಾಂಧಿಯವರ ಟ್ಯಾಬ್ಲೂಗಳನ್ನು ತೆಗೆಯತಕ್ಕ ಅವಶ್ಯಕತೆ ಏನಿತ್ತು ?

ಶ್ರೀ ಡಿ. ಟಿ. ಜಯಕುಮಾರ್.—ಸಮ್ಮೇಳನ ನಡೆಸಿದ್ದು ಇವರೋ ಅಥವಾ ನಾವೋ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ದೇಶದ ಬಗ್ಗೆ, ಗಾಂಧೀಜಿಯವರ ಬಗ್ಗೆ ಅಭಿಮಾನ ಇದೆಯೆಂದು ಹೇಳುತ್ತೀವೆ. ಇಲ್ಲಾ ಎಂದು ಅವರು ಸಾಬೀತು ಮಾಡಬೇಕಾದರೆ ಸ್ಪಷ್ಟವಾಗಿ......

ಶ್ರೀ ಕೆ. ಮಲ್ಲಪ್ಪ.—ನಮ್ಮ ಮೇಲೆ ಕೆಟ್ಟ ಹೆಸರು ತರಲು ಬೇಕೆಂತಲೇ ತಮ್ಮ ಪಕ್ಷದವರೇ ಏಕೆ ಮಾಡಿರಬಾರದು ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಹೇಳಿ

ಶ್ರೀ ಆರ್. ವೆಂಕಟರಾಮಯ್ಯ.—ನಿಯಮ ೩೧೧ ಈ ರೀತಿ ಹೇಳುತ್ತದೆ.

'ಒಬ್ಬ ವ್ಯಕ್ತಿಯನ್ನು ಕುರಿತ ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ. ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು

ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು.........

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ರೀತಿಯಾಗಿ ದೇಶದ್ರೋಹ ಮಾಡತಕ್ಕ ಕೆಲಸಕ್ಕೆ ಇವತ್ತಿನ ದಿವಸ ತಾವು ಹೋಗಿದ್ದೀರಿ. ಇದನ್ನು ಯಾರು ಮಾಡಿದ್ದಾರೆ ? ಯಾರು ಮಾಡಿಸಿದರು ? ಅದರ ಬಗ್ಗೆ ನಾವು ಕಂಡುಹಿಡಿಯಬೇಕಾಗಿದೆ. ಅದಕ್ಕಾಗಿ ಒಂದು ಸದನದ ಸಮಿತಿಯನ್ನು ಮಾಡುವುದು ಅವಶ್ಯಕತೆ ಇದೆ. ಸದನದ ಸಮಿತಿಯಲ್ಲಿ ಮೇಲ್ಮನೆಯ ಸದಸ್ಯರು ಮತ್ತು ಈ ಮನೆಯ ಸದಸ್ಯರು ಇರಲಿ. ಸದನದ ಸಮಿತಿಯನ್ನು ನೇಮಕ ಮಾಡಿದರೆ ಇದನ್ನು ಯಾರು ಮಾಡಿಸಿದರು, ಪೋಲೀಸ್‌ನವರೇ ಮಾಡಿದ್ದಾರೆಯೇ ಅಥವಾ ಬೇರೆ ಯಾರಾದರೂ ಮಾಡಿಸಿದ್ದಾರೆಯೇ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ರೂಲ್ಸ್ ಪ್ರಕಾರ ಪರ್ಮಿಷನ್ ತೆಗೆದುಕೊಂಡಿದ್ದಾರೆ ಅಲ್ಲಿ ಕಟೌಟ್ ಹಚ್ಚಿದ್ದಾರೆ. ಆದರೂ ಸಹ ಕಿತ್ತುಹಾಕಿದ್ದಾರೆಂದರೆ ಏನು ? ಪತ್ರಿಕೆಗಳಲ್ಲಿ ಸಂಚಾರಿ ಪೋಲೀಸರು ತೊಂದರೆಯಾಗುತ್ತದೆಂದು ತೆಗೆದುಹಾಕಿದ್ದಾರೆಂದು ಬಂದಿದೆ. ಹಾಗಾದರೆ ಅಲ್ಲಿ ಅಡ್ವರ್‌ಟೈಸ್‌ಮೆಂಟ್ ಬೋರ್ಡ್ ಹಾಕಲಿಕ್ಕೆ ಏತಕ್ಕೆ ಅವಕಾಶ ಮಾಡಿಕೊಟ್ಟರು ? ಟ್ರೇಡ್‌ವೆಲ್ ಸರ್ವೀಸಸ್‌ನವರು ಬೋರ್ಡ್ ಮೇಲೆ ಕಟೌಟ್ ನಿಲ್ಲಿಸಲಿಕ್ಕೆ ಕಾರ್ಪೊರೇಷನ್‌ನವರು ಪರ್ಮಿಷನ್ ಕೊಟ್ಟಿದ್ದಾರೆ. ನಾಲ್ಕು ಕಟೌಟ್‌ಗಳನ್ನು ಹಚ್ಚಲಿಕ್ಕೆ ಪರ್ಮಿಷನ್ ಇಲ್ಲ. ಟ್ರಾಫಿಕ್‌ಗೆ ತೊಂದರೆಯಾಗುತ್ತದೆಂದು ಹೇಳಿದರೆ, ಅದಕ್ಕೆ ಅದನ್ನು ತೆಗೆದು ಬಿಸಾಡಿದ್ದಾರೆ. ಇವರಿಗೆ ತೊಂದರೆಯಾಗಿದ್ದರೆ ನೇರವಾಗಿ ಯಾರು ಕಟೌಟ್‌ಗಳನ್ನು ಹಚ್ಚಿದ್ದಾರೆ ಅವರನ್ನು ಕೇಳಬೇಕಾಗಿತ್ತು. ಈ ಕೆಲಸವನ್ನು ನೀವು ಪೋಲೀಸ್‌ನವರ ಕೈಯಾರೆ ಮಾಡಿಸಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನೆಲ್ಲಾ ಕಂಡುಹಿಡಿಯಬೇಕಾದರೆ ಸದನದ ಸಮಿತಿ ಅವಶ್ಯ. ದಯವಿಟ್ಟು ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇದನ್ನು ಉಳಿದಂತಹ ಕೆಲವು ಅಂಶಗಳನ್ನು ಇಲ್ಲಿ ಹೇಳಬೇಕಾಗಿದೆ. ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ವಿಚಾರವನ್ನು ನಿಲುವಳಿ ಸೂಚನೆಯ ಪ್ರಕಾರ ಮಾನ್ಯ ವಿರೋಧಪಕ್ಷದ ನಾಯಕರು ತಂದಿರತಕ್ಕ ವಿಷಯ ಅತ್ಯಂತ ಸೂಕ್ಷ್ಮವಾಗಿರತಕ್ಕ ವಿಷಯ, ಮತ್ತು ಎಲ್ಲರ ಮನಸ್ಸನ್ನು ಕಲಕತಕ್ಕ ವಿಷಯ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಚುನಾವಣೆಗಳು ಆದಮೇಲೆ, ಏಕ ಕಾಲದಲ್ಲಿ ಎಲ್ಲಾ ಪ್ರತಿನಿಧಿಗಳನ್ನು ಒಟ್ಟಿಗೆ ಸೇರಿಸಬೇಕೆನ್ನುವ ಉದ್ದೇಶದಿಂದ ಯಾವ ಪಕ್ಷಭೇದವಿಲ್ಲದೆ ಸೇರಿಸಿರತಕ್ಕದ್ದು ತಮ್ಮೆಲ್ಲರಿಗೂ ಗೊತ್ತಿರತಕ್ಕ ವಿಷಯ. ಎಲ್ಲಾ ಪ್ರತಿನಿಧಿಗಳನ್ನು ರಾಜಧಾನಿಯಲ್ಲಿ ಒಟ್ಟಿಗೆ ಸೇರಿಸಿ ಅವರಿಗೆ ಉತ್ಸಾಹ ಬರುವ ರೀತಿಯಲ್ಲಿ ಮತ್ತು ಅವರ ಕರ್ತವ್ಯದ ಕಡೆಗೆ ಏನೇನು ಕಾರ್ಯವನ್ನು ಮಾಡಬೇಕೆನ್ನುವ ದೃಷ್ಟಿಯಿಂದ ದೇಶಕ್ಕೆ ಸ್ವರಾಜ್ಯ ತಂದುಕೊಟ್ಟ ಪೂಜ್ಯ ಮಹಾತ್ಮ ಗಾಂಧೀಜಿಯವರ ದೊಡ್ಡ ಭಾವಚಿತ್ರವನ್ನು ಆ ವೇದಿಕೆಯ ಮೇಲೆ ಇಟ್ಟುಕೊಂಡು ಅವರು ಕಂಡಂತಹ ಕನಸನ್ನು ಅವರ ಅಂಶಗಳನ್ನು ಬರೆದು ಮಾಡಿದ್ದಾರೆ. ನಾವು ಅವಮಾನ ಮಾಡಿದ್ದೇವೆಂದು ಹೇಳಿದರೆ ಏನು ಹೇಳಬೇಕೋ ಗೊತ್ತಿಲ್ಲ.........

ಶ್ರೀ ಬಿ. ಎ. ಉಮರಬ್ಬ.—ನಿಮ್ಮ ವೇದಿಕೆಯ ಮೇಲೆ ಇರತಕ್ಕ ಗಾಂಧಿ ಬೇರೆ, ನಮ್ಮ ವೇದಿಕೆಯ ಮೇಲೆ ಇರತಕ್ಕ ಗಾಂಧಿ ಬೇರೆಯೆ ? ಹಾಗಾದರೆ ಎರಡು ಗಾಂಧಿ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಶಾಂತಿಯಿಂದ ಕೂಡಬೇಕು.

(ಗೊಂದಲ)

ಶ್ರೀ ಬಿ. ರಾಚಯ್ಯ.—ಜನತೆಯ ಕೈಗೆ ಅಧಿಕಾರ ಕೊಡತಕ್ಕಂಥ ದೃಷ್ಟಿಯಿಂದ ಒಂದು ಸ್ಲೋಗನ್ ಅನ್ನು ಬರೆದಿಟ್ಟು ಎಲ್ಲರಿಗೂ ಅದು ಕಾಣತಕ್ಕಂಥ ಸ್ಥಳದಲ್ಲಿಟ್ಟು ಅದನ್ನು ಕೂರಿಸಿದ್ದೆವು. ಬಹುಶಃ ಅಲ್ಲಿಗೆ ಬರತಕ್ಕಂಥ ಪ್ರತಿನಿಧಿಗಳಿಗೆ ಏಕೆಂದರೆ ಅಲ್ಲಿ ಒಂದೇ ಪಕ್ಷಕ್ಕೆ ಸೇರಿದ ಪ್ರತಿನಿಧಿಗಳು ಬರುತ್ತಿರಲಿಲ್ಲ. ಎಲ್ಲಾ ಪಕ್ಷದ ಪ್ರತಿನಿಧಿಗಳೂ ಗೆದ್ದುಬಂದಿದ್ದಾರೆ. ಬಹುಶಃ ಎಲ್ಲಾ ಪ್ರತಿನಿಧಿಗಳು ಅವರವರ ಮುಖಂಡರ ಒಂದೊಂದು ಕಟೌಟ್‌ಗಳನ್ನು ಅಲ್ಲಿ ಇಟ್ಟರೆ ಗೊಂದಲಕ್ಕೆ ಅವಕಾಶ ಆಗುತ್ತದೆ ಎನ್ನುವ ದೃಷ್ಟಿಯಿಂದ ನಾವು ನಿಜವಾಗಿ ರಾಷ್ಟ್ರಪಿತನ ಒಂದು ಕಟೌಟ್‌ನ್ನು ಇಟ್ಟು ಜನತೆಯ ಕೈಗೆ ಅಧಿಕಾರ

ಕೊಡಬೇಕೆನ್ನುವ ಗಾಂಧೀಜಿಯವರ ಕನಸನ್ನು ಅಲ್ಲಿ ಬರೆಸಿದ್ದೆವು. ಪಕ್ಷಗಳ ಒಂದು ಗೊಂದಲಾಟ ಬಾರದೇ ಇರಲಿ ಎನ್ನುವ ದೃಷ್ಟಿಯಿಂದ ಅದನ್ನು ಮಾಡಲಾಗಿತ್ತು. ಆದರೂ ಕೂಡ ಕೆಲವು ಪಕ್ಷದವರು ಅವರವರ ನಾಯಕರುಗಳನ್ನು......

ಶ್ರೀ ಬಿ. ಬಸವಲಿಂಗಪ್ಪ.—ಯಾವ ಪಕ್ಷದವರು ?

ಶ್ರೀ ಬಿ. ರಾಚಯ್ಯ.—ಅಲ್ಲಿ ಬಿ.ಜೆ.ಪಿ.ಯವರು ಇದ್ದರು, ಕಮ್ಯುನಿಸ್ಟ್ ಪಕ್ಷದವರಿದ್ದರು. ಸ್ವತಂತ್ರ, ಜನತಾ ಪ್ರತಿನಿಧಿಗಳಿದ್ದರು. ಅವರೆಲ್ಲರೂ ಕೂಡ ತಮ್ಮ ನಾಯಕರುಗಳ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗಾಂಧೀಜಿಯವರು ಯಾವ ಪಕ್ಷಕ್ಕೆ ಸೇರಿದವರು ?

ಶ್ರೀ ಬಿ. ರಾಚಯ್ಯ.—ಅವರು ಈ ದೇಶಕ್ಕೆ ಸೇರಿದವರು.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ ? ನೀವು ಮಾತನಾಡುವಾಗ ಅವರು ಸುಮ್ಮನೆ ಕೂತಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಚಿವರು ವಿವಾದಕ್ಕೆ ಆಸ್ಪದ ಕೊಡದಹಾಗೆ ಮಾತನಾಡಿದರೆ ಒಳ್ಳೆಯದು.

ಅಧ್ಯಕ್ಷರು.—ಬಸವಲಿಂಗಪ್ಪನವರೇ ನೀವು ಕೂಡಿರಿ. ನೀವು ಈ ಮನೆಯ ಒಬ್ಬ ಹಿರಿಯ ಸದಸ್ಯರು ಇದ್ದೀರಿ.

ಶ್ರೀ ಬಿ. ರಾಚಯ್ಯ.—ಅವರು ಹೇಳಿದ ಧಾಟಿಯಲ್ಲಿ ನಾನು ಮಾತನಾಡುವುದಕ್ಕೆ ಆಗುವುದಿಲ್ಲ. ಬಹುಶಃ ಈ ರೀತಿಯಲ್ಲಿ ಇದನ್ನು ಹಾಕುವುದರಿಂದ ಪ್ರತಿನಿಧಿಗಳಿಗೆ ಒಬ್ಬರಿಗೊಬ್ಬರಿಗೆ ಗೊಂದಲ ಬಾರದೇ ಇರಲಿ, ಆ ಪಕ್ಷಗಳನ್ನು ಪ್ರತಿನಿಧಿಸತಕ್ಕಂಥ ಆ ಒಂದು ಭಾವಚಿತ್ರಗಳಿಂದ, ಅದರಲ್ಲಿ ಪತ್ರಿಕೆಗಳಲ್ಲಿ ಬರೆದಿರುವಂಥ ವಿಷಯಗಳನ್ನು ನೋಡಿದಾಗ ಒಂದು ರೀತಿಯಲ್ಲಿ ಸಮಾಧಾನ ಆಗದೇ ಇರಬಹುದು, ಆದರೆ ಇವತ್ತು ನಾನು ಹೇಳುವಂಥಾದ್ದು ಇಷ್ಟೆ. ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ಭಾವಚಿತ್ರವಾಗಲೀ, ನೆಹರೂರವರ ಭಾವಚಿತ್ರವಾಗಲೀ ಅಥವಾ ನಮ್ಮ ಪ್ರಧಾನಿಯವರ ಭಾವಚಿತ್ರವಾಗಲೀ ಅಲ್ಲಿ ಅನಾವಶ್ಯಕ ಆಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆ ಅನಾವಶ್ಯಕ ಆಗಿತ್ತು ?

(ಗೊಂದಲ)

ಅಧ್ಯಕ್ಷರು.—ಶ್ರೀ ಖರ್ಗೆಯವರೇ, ಅವರು ಏನು ಹೇಳುತ್ತಾರೆ ನೋಡೋಣ. ಅಷ್ಟರಲ್ಲಿ ನೀವು ಮಧ್ಯೆ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ನೀವು ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಅವರು ಮತನಾಡುವಾಗ ನಾವು ತಾಳ್ಮೆಯಿಂದ ಕೇಳಿದ್ದೇವೆ. ನಾನು ಹೇಳುವ ವಿಷಯ ಅವರಿಗೆ ಒಪ್ಪದೇ ಇರಬಹುದು.

ಶ್ರೀ ಧರ್ಮಸಿಂಗ್.—ಸರ್ಕಾರದ ಕಡೆಯಿಂದ ಉತ್ತರ ಕೊಡುವಾಗ ಶಾಂತರೀತಿಯಿಂದ ಕೇಳುವ ಹಾಗೆ ಕೊಡಿ.

ಶ್ರೀ ಬಿ. ರಾಚಯ್ಯ.—ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ. ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ಚಿತ್ರಗಳು ಬೇಡವಾಗಿತ್ತು ಎನ್ನುವುದಾದರೆ ಇಲ್ಲಿರುವ ಭಾವಚಿತ್ರಗಳನ್ನು ತೆಗೆದುಹಾಕಿಬಿಡಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಬಹುಶಃ ಯಾವ ಸ್ಥಳದಲ್ಲಿ ಅದು ಇರಬೇಕಾಗಿತ್ತೋ ಆ ಸ್ಥಳದಲ್ಲಿ ಇಟ್ಟು ಕೂಡಿಸಿದ್ದರೆ ಅದಕ್ಕಿಂತ ಹೆಚ್ಚಿನ ಗೌರವ ಬರುತ್ತಿತ್ತು. ಯಾರೋ ಕಾರ್ಯಕರ್ತರು ಇದನ್ನು ಕಿತ್ತು ಹಾಕಿದ್ದಾರೆ. ಯಾರು ಕಿತ್ತುಹಾಕಿದ್ದಾರೆ ಎಂದು ಗೊತ್ತಾಗಲಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ರಾಷ್ಟ್ರಪಿತನ ಭಾವಚಿತ್ರಕ್ಕೆ ಗೌರವ ಕೊಡತಕ್ಕಂಥಾದ್ದು ಎಲ್ಲರ ಕರ್ತವ್ಯ. ಆ ಕಟ್‌ಔಟ್‌ನ್ನು ಯಾರೋ ಕಿತ್ತುಹಾಕಿದರೆ ಯಾರೋ ತೆಗೆದುಹಾಕಿದರೇ ಇದನ್ನು ಸರ್ಕಾರವೇ ಮಾಡಿದೆ ಯೆಂದು ಹೇಳತಕ್ಕಂಥ ಈ ಆಪಾದನೆ ಏನಿದೆ ಇದನ್ನು ನಾನು ನಿರಾಕರಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ಅಸೆಂಬ್ಲಿಯಲ್ಲಿ ಎಲ್ಲಾ ಚರ್ಚೆಯಾಗಲಿ ಎಂದು ಹೇಳಿ, ತಮಗೆ ಅವಕಾಶ ಕೊಟ್ಟಿದ್ದೇನೆ. ತಾವು ಉತ್ತರ ಹೇಳುವುದಕ್ಕೂ ಬಿಡುವುದಿಲ್ಲ ಎಂದರೆ ಏನು?

ಶ್ರೀ ಬಿ. ರಾಚಯ್ಯ.—ಸರ್ಕಾರದ ಒಂದು ಆದೇಶದ ಮೇಲೆ, ಇದನ್ನು ಮಾಡಿದ್ದಾರೆ ಎನ್ನುವುದನ್ನು ನಾನು ಖಂಡತುಂಡವಾಗಿ ನಿರಾಕರಿಸುತ್ತೇನೆಂದು ಹೇಳಿದ್ದೇನೆ. ಇಂತಹ ರಾಷ್ಟ್ರನಾಯಕರ ಭಾವಚಿತ್ರಕ್ಕೆ ಆಗಿರತಕ್ಕಂಥ ಒಂದು ಕೆಲಸಕ್ಕಾಗಿ ನಾನು ವೈಯಕ್ತಿಕವಾಗಿ ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ನನಗೆ ಎಷ್ಟು ಗೌರವ ಇದೆಯೋ, ಅವರಿಗೂ ಅಷ್ಟೇ ಗೌರವ ಇದೆ ಎಂಬುದು ನನಗೆ ಗೊತ್ತಿದೆ. ಈ ಗೌರವವನ್ನು ಕಾಪಾಡುವ ಕೆಲಸವನ್ನು ಅವರು ಮಾಡಬೇಕಾಗಿತ್ತು. ಯಾರೋ ಮಾಡಿದ ಅವಮಾನಕ್ಕೆ, ನಾವು ಮಾಡಿದ್ದೇವೆಂದು ಹೇಳಿದರೆ, ಅದನ್ನು ನಾನು ನಂಬುವುದಕ್ಕಾಗುವುದಿಲ್ಲ. ಇದು ಯಾರ ಗುತ್ತಿಗೆ ಅಲ್ಲ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ, ಜವಹರಲಾಲ್ ನೆಹರೂರವರ ಫೋಟೋಗಳನ್ನು ಅವರು ಮಾತ್ರ ಇಟ್ಟಿದ್ದಾರೆ, ನಾವು ಇಟ್ಟಿಲ್ಲವೆಂದು ತಿಳಿದುಕೊಳ್ಳಬೇಡಿ, ಅವರು ಇಡೀ ರಾಷ್ಟ್ರಕ್ಕೇ ಸೇರಿದವರು. ಈ ವಿಷಯ ಆ ರೀತಿ ಆಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆಂದು ಈಗಾಗಲೇ ಹೇಳಿದ್ದೇನೆ. ನಮ್ಮ ಆದೇಶದ ಮೇಲೆ ಮಾಡಿದ್ದಾರೆಂದು ಹೇಳುವಾಗ ನನಗೆ ನೋವಾಗುತ್ತಿದೆ. ಯಾರು ಈ ಕೆಲಸ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಬಲ್ಲೆ.

ಅಧ್ಯಕ್ಷರು.—ವಿಷಾದಪಡುತ್ತೇನೆಂದು ಹೇಳಿದ್ದಾರೆ ಮತ್ತು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳುತ್ತಾ ಇದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಚಯ್ಯನವರು ವಿಷಾದ ವ್ಯಕ್ತ ಮಾಡಿದ್ದಾರೆ, ಸಂತೋಷ. ಆದರೆ ಒಂದು ಮಾತು. ಯಾವ ಸದಸ್ಯರೂ ಸಹ ವ್ಯಕ್ತಿಶಃ ಯಾರೂ ಆರೋಪ ಮಾಡಲಿಲ್ಲ. ಯಾರು ಹೇಳಿದ್ದಾರೆಂದು ಒತ್ತಾಯ ಮಾಡಿದಾಗ ಈ ಘಟನೆ ಆದದ್ದು ನಿಜ. ಪೋಲೀಸಿನವರು ಮಾಡಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಮಾನ್ಯ ರಾಚಯ್ಯನವರು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ, ಪೋಲೀಸಿನವರು ಮಾಡಿದ್ದನ್ನು ಪೋಲೀಸಿನವರಿಂದಲೇ ತನಿಖೆ ಮಾಡಿಸಿದರೆ ಏನು ಅರ್ಥ ಇರುತ್ತದೆ. ಆದ್ದರಿಂದ ಇದನ್ನು ಸಿ. ಬಿ. ಐ. ಗೆ ಹಾಕಿ ಅಥವಾ ಇದಕ್ಕೆ ಒಂದು ಸದನದ ಕಮಿಟಿ ನೇಮಕ ಮಾಡಿ. ನಿಮಗೆ ಪದೇ ಪದೇ ಕೆಟ್ಟ ಹೆಸರು ತರುವ ಪೋಲೀಸರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಿ ಎಂದು ಹೇಳಿದರೆ ಆಗುವುದೇ ಹೀಗೆ. ಪೋಲೀಸಿನವರು ಕಿತ್ತಿರುವುದರಿಂದ ನೀವು ಸುಮ್ಮನೆ ಇದ್ದರೆ, ನಿಮಗೆ ಕೆಟ್ಟ ಹೆಸರು ಬರುತ್ತದೆ. ದೇಶದ ಹಿತದೃಷ್ಟಿಯಿಂದ, ನಿಮ್ಮ ಪಕ್ಷದ ಹಿತದೃಷ್ಟಿಯಿಂದ ಈ ಕೆಲಸ ಮಾಡಬೇಕು. ತಮಗೆ ಗೊತ್ತಿದೆ, ಮೊನ್ನೆ ತಾನೆ ಮಾನ್ಯ ಕರುಣಾನಿಧಿಯವರು ಸಂವಿಧಾನದ ಪ್ರತಿಗಳನ್ನು ಹರಿದು ಹಾಕಿದರು, ಅದಕ್ಕೆ ಶಿಕ್ಷೆ ಅನುಭವಿಸಬೇಕಾಯಿತು. ಇವತ್ತು ನೀವು ಇಂತಹ ಕೆಲಸಗಳ ಬಗ್ಗೆ ಕ್ರಮ ತೆಗೆದುಕೊಳ್ಳಗೇಹೋದರೆ ಗುನ್ನೇದಾರರಾಗುತ್ತೀರಿ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅಪರಾಧ ಎಸಗಿದಂತಾಗುತ್ತದೆ. ಈ ಕೆಲಸವನ್ನು ಯಾವ ಪೋಲೀಸಿನವರು ಮಾಡಿದ್ದಾರೆ, ಅವರಿಗೆ ಪ್ರಾಸಿಕ್ಯೂಟ್ ಮಾಡುವ ಹಾಗೆ ಮಾಡಿ.

ಶ್ರೀ ಬಿ. ರಾಚಯ್ಯ.—ಪೋಲೀಸಿನವರು ಮಾಡಿಲ್ಲ. ಅವರು ಮಾಡಿದ್ದಾರೆಂದು ರುಜುವಾತಾದರೆ, ಅವರಿಗೆ ಶಿಕ್ಷೆ ವಿಧಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಒಂದು ಸಂಶಯ ಬಂದಿದೆ. ಸ್ಟೇಟ್‌ಮೆಂಟ್ ಕೊಟ್ಟಾಗ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರೂಲ್ಸ್ ಪ್ರಕಾರ ಜೀವರಾಜ ಆಳ್ವರವರ ಹೆಸರು......

ಅಧ್ಯಕ್ಷರು.—ಆ ವಿಷಯ ಬಿಟ್ಟುಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ರಾಚಯ್ಯನವರು ಹೇಳಿದರು. ಏನೆಂದರೆ, ಅನಾವಶ್ಯಕವಾಗಿ ಅಲ್ಲಿ ಫೋಟೋಗಳನ್ನು ಇಟ್ಟಿದ್ದರು. ಅಲ್ಲಿ ಇಡಬಾರದಿತ್ತು. ಅಲ್ಲಿ ಅನಾವಶ್ಯಕವಾಗಿ ಇಟ್ಟಿದ್ದರು ಎಂದು ಅವರು ಹೇಳಿದ್ದನ್ನು ನೋಡಿದರೆ ನಮಗೆ ಸಂಶಯ ಬರುತ್ತದೆ. ಅಲ್ಲಿ ಅವಶ್ಯ ಇರಲಿಲ್ಲ ಅದಕ್ಕಾಗಿ ನಾವು ತೆಗೆಸಿದ್ದೇವೆ ಎನ್ನುವುದನ್ನು ಇನ್‌ಡೈರೆಕ್ಟಾಗಿ ಒಪ್ಪಿದ್ದಾರೆ. ಅಂದರೆ ಅವರ ಶಬ್ದದ ಅರ್ಥ ಏನು? ಅವಶ್ಯ ಇರಲಿಲ್ಲ, ಅವಶ್ಯ ಎತ್ತಕಡೆ ಇಟ್ಟಿದ್ದರೆ ಸರಿ ಇರುತ್ತಿತ್ತು. ಈಗಾಗಲೇ ಈ ಬಗ್ಗೆ ತಮಗೆ ಒಂದು ಕಾಪಿ ಕೊಟ್ಟಿದ್ದೇನೆ. ಅಡ್ವರ್ಟೈಸ್‌ಮೆಂಟ್ ಜಾಗದಲ್ಲಿ ಹಾಕಬಾರದು. ಅವರು ಇದಕ್ಕಾಗಿ ಕಾರ್ಪೊರೇಷನ್‌ನವರ ಪರ್ಮಿಷನ್ ಈಗಾಗಲೇ ತೆಗೆದುಕೊಂಡಿದ್ದಾರೆ. ಅನಾವಶ್ಯಕ ಎನ್ನುವುದು ಬೇರೆ ಪ್ರಶ್ನೆ. ಮಹಾತ್ಮ ಗಾಂಧಿಯವರ, ನೆಹರೂ ಅವರ ಫೋಟೋಗಳನ್ನು ನೀವು ಇಟ್ಟರೆ ಅವಶ್ಯ, ನಾವು ಇಟ್ಟರೆ ಅನಾವಶ್ಯ. ಇದರಲ್ಲಿ ಸರಕಾರದ ಕೈವಾಡ ಇದೆ ಎನ್ನತಕ್ಕಂಥಾದ್ದು ನಿಮ್ಮ ಈ ಸೆಂಟೆನ್ಸ್‌ನಿಂದ ಉದ್ಭವ ಆಗುತ್ತದೆ. ಈ ವಾಕ್ಯದಿಂದ ಮತ್ತು ಮಾನ್ಯ ಸಚಿವರು ಹೇಳಿದಂಥ ಮಾತಿನಿಂದ ಇದನ್ನು ಅವರೇ ಮಾಡಿಸಿದ್ದಾರೆ, ಅಂದರೆ ಸರಕಾರದವರೇ ಮಾಡಿಸಿದ್ದಾರೆ ಎನ್ನತಕ್ಕಂಥಾದ್ದನ್ನು ಬಹಳ ಸ್ಪಷ್ಟವಾಗಿ ನಾನು ಹೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ನಾನೂ ಅವರಿಗಿಂತ ಗಟ್ಟಿಯಾದ ಧ್ವನಿಯಿಂದ ಹೇಳಬಲ್ಲೆ, ಖಡಾಖಂಡಿತವಾಗಿ ಹೇಳಬಲ್ಲೆ, ಆತ್ಮಸಾಕ್ಷಿಯಿಂದ ಹೇಳಬಲ್ಲೆ, ಅವರು ಹೇಳತಕ್ಕಂಥಾದ್ದು ಶುದ್ಧ ತಪ್ಪು, ಸತ್ಯಕ್ಕೆ ದೂರವಾದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವೂ ಆತ್ಮ ಸಾಕ್ಷಿಯಿಂದ ಹೇಳುತ್ತೇವೆ, ಇದು ಸರಕಾರ ಮಾಡಿಸಿದ್ದು ಮತ್ತು ಪೋಲೀಸರು ಮಾಡಿದ್ದು.

ಶ್ರೀ ಎಸ್, ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ವಿಷಯದಲ್ಲಿ ಸಾಕಷ್ಟು ವಿವರಗಳನ್ನು ಈಗಾಗಲೇ ವಿರೋಧ ಪಕ್ಷದ ನಾಯಕರು, ಉಪನಾಯಕರು ಹೇಳಿದ್ದಾರೆ. ಸರಕಾರದ ಪರವಾಗಿ ಶ್ರೀಮಾನ್ ರಾಚಯ್ಯನವರು ಹೇಳಿಕೆ ಕೂಡಾ ಕೊಟ್ಟಿದ್ದಾರೆ. ಈಗ ಇರತಕ್ಕಂಥ ವಿಚಾರ ಇಷ್ಟೇ. ಮಹಾತ್ಮಾ ಗಾಂಧಿಯವರ ಬಗ್ಗೆ ಪೂಜ್ಯ ಭಾವನೆಯಿಂದ ನೋಡತಕ್ಕ ವಿಚಾರ. ಅವರು ಇಡೀ ರಾಷ್ಟ್ರದ ಒಂದು ಆಸ್ತಿ ಸ್ವತ್ತು ಎನ್ನತಕ್ಕಂಥ ಭಾವನೆಯಿಂದ ನಾವು ಎಲ್ಲರೂ ನೋಡುವುದರಿಂದ ಇದು ಪಕ್ಷಾತೀತವಾಗಿ ನೋಡತಕ್ಕಂಥ ವಿಚಾರನೂ ಹೌದು. ಅದೇ ರೀತಿಯಾಗಿ, ಪ್ರಧಾನ ಮಂತ್ರಿಗಳು, ಯಾವುದೇ ಪಕ್ಷದವರು ಇರಲಿ, ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಅವರಿಗೆ ಅಷ್ಟೇ ಗೌರವ ಕೊಡತಕ್ಕದ್ದು. ಜನತಾ ಪಕ್ಷದ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ, ಪ್ರಧಾನ ಮಂತ್ರಿಗಳು ಇಲ್ಲಿಗೆ ಬಂದಾಗ ಅವರನ್ನು ಇವರು ಹೋಗಿ ಬರಮಾಡಿಕೊಳ್ಳತಕ್ಕ ಉದ್ದೇಶ ಏನು ಎಂದರೆ, ಅವರು ನಮ್ಮ ರಾಷ್ಟ್ರಕ್ಕೆ ಪ್ರಧಾನ ಮಂತ್ರಿಗಳಾಗಿದ್ದಾರೆ ಎಂಬ ದೃಷ್ಟಿಯಿಂದ. ಈ ಕಾರಣಕ್ಕಾಗಿ ಅವರು ಬಂದಾಗ ಇವರು ಹೋಗಿ ಬರಮಾಡಿಕೊಳ್ಳತಕ್ಕದ್ದು ಅಥವಾ ಕಳುಹಿಸಿಕೊಡತಕ್ಕದ್ದು, ಅದು ಹಾಗೇ ಇರುತ್ತದೆ. ಇವತ್ತು ಮುನಿಸಿಪಾಲಿಟಿಗಳು, ಜಿಲ್ಲಾ ಪರಿಷತ್ತುಗಳು ಬೇರೆ ಬೇರೆ ಪಕ್ಷಗಳ ಕೈಯಲ್ಲಿ ಬರಬಹುದು, ನಾಳೆ ಮುಖ್ಯ ಮಂತ್ರಿಗಳು, ಬೇರೆ ಮಂತ್ರಿಗಳು ಅಲ್ಲಿಗೆ ಹೋದಾಗ, ಅಲ್ಲೂ ಕೂಡಾ ಪಕ್ಷಾತೀತವಾಗಿ ನೋಡತಕ್ಕ ವಿಚಾರ ಇದೆ. ಅಲ್ಲೂ ಕೂಡಾ ಒಂದು ನೀತಿಯನ್ನು ನಾವು ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಇರತಕ್ಕ ಪ್ರಶ್ನೆ ಫೋಟೋಗಳನ್ನು ಹರಿದು ಹಾಕಿರತಕ್ಕಂಥಾದ್ದರ ಬಗ್ಗೆ, ಅವುಗಳನ್ನು ನೋಡಿದರೆ ಆ ಫೋಟೋಗಳನ್ನು ನೋಡಿದರೆ ಯಾರಿಗಾದರೂ ಅರ್ಥವಾಗುತ್ತದೆ, ಎಲ್ಲಾ ಫೋಟೋಗಳನ್ನು ಹರಿದುಹಾಕಿರತಕ್ಕದ್ದು ಗೊತ್ತಾಗುತ್ತದೆ. ಪೂಜ್ಯ ಮಹಾತ್ಮಾ ಗಾಂಧೀಜಿಯವರ ಫೋಟೋ ಹರಿದು ಹಾಕಿರತಕ್ಕದ್ದು, ಹಾಗೆ ಹಿಂದಿನ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ, ಲಾಲ್‌ಬಹದ್ದೂರ್ ಶಾಸ್ತ್ರಿಯವರ, ನೆಹರೂ ಅವರ ಹಾಗೂ ಹಾಲಿ ಇರತಕ್ಕ ಪ್ರಧಾನ ಮಂತ್ರಿಯವರಾದ ಶ್ರೀ ರಾಜೀವ ಗಾಂಧಿಯವರ ಫೋಟೋಗಳನ್ನು ಹರಿದು ಹಾಕಿರತಕ್ಕದ್ದು ನೋಡಿದರೆ ಗೊತ್ತಾಗುತ್ತದೆ. ನಮ್ಮ ರಾಷ್ಟ್ರಧ್ವಜ ಇದೆ, ಅದಕ್ಕಾಗಿ ಒಂದು ಕಾನೂನು ಇದೆ ಹಾಗೇ ರಾಷ್ಟ್ರಪಿತರ ಬಗ್ಗೆ ರಿಲವೆಂಟ್ ಪ್ರಾವಿಜನ್ ಇದೆಯೋ ಏನೋ ಗೊತ್ತಿಲ್ಲ, ನ್ಯಾಷನಲ್ ಫ್ಲಾಗ್ ಜೊತೆಗೆ, ಮಹಾತ್ಮಾಗಾಂಧಿಯವರ ವಿಚಾರ ಬಂದಿರಬಹುದು. ಅದನ್ನು ನಾನು ನೋಡಿಲ್ಲ. ಈ ಸದನದ ಗಮನಕ್ಕೆ ತಮ್ಮ ಮುಖಾಂತರ ತರುವುದಾದರೆ, ಏತಕ್ಕೆ ಈ ಕಾನೂನನ್ನು

ಮಾಡಿದ್ದಾರೆ, ಅವರು ನಮ್ಮ ಹಿರಿಯರು, ಅದು ನಮಗೆ ಪೂಜ್ಯ ವಸ್ತು ಎಂಬ ಭಾವನೆಯಿಂದ ಮಾಡಿದ್ದಾರೆ. ಮಹಾತ್ಮಾಗಾಂಧೀಜಿಯವರು ಪಕ್ಷಾತೀತರು ಎಂದು ಹೇಳಿ ಅವರ ಫೋಟೋವನ್ನು ತಾವು ಇಟ್ಟಿದ್ದೀರಿ ಎಂಬ ಮಾತನ್ನು ಹೇಳಿದಿರಿ, ಅದು ತಮಗೆ ಬಿಟ್ಟ ವಿಚಾರ, ಮಹಾತ್ಮಾ ಗಾಂಧೀಜಿಯವರ ಭಾವಚಿತ್ರ ತಾವು ತಮಗೆ ಬೇಕಾದ ಸ್ಥಳದಲ್ಲಿ ತಾವು ಇಟ್ಟರೆ ಅದಕ್ಕೆ ಪೂಜ್ಯತೆ ಬರುತ್ತದೆ. ಅದೇ ಭಾವಚಿತ್ರವನ್ನು ಬಳ್ಳಾರಿ ರೋಡ್‌ಕಡೆ ಮತ್ತೊಂದು ಕಡೆ ಇಟ್ಟರೆ ಅದಕ್ಕೆ ಪೂಜ್ಯತೆ ಬರುವುದಿಲ್ಲ, ಒಂದು ಕಡೆ ಇದ್ದರೆ ಬೆಲೆ ಇದೆ ಮತ್ತೊಂದು ಕಡೆ ಇದ್ದರೆ ಬೆಲೆ ಇಲ್ಲ ಬೆಲೆ ಕಡಿಮೆ ಎಂದು ಹೇಳುವುದು ತಪ್ಪಾಗುತ್ತದೆ. ಅದನ್ನು ತಾವು ಒಪ್ಪುತ್ತೀರಿ.

ಶ್ರೀ ಬಿ. ರಾಚಯ್ಯ.—ಅದನ್ನು ನಾವು ಮಾಡಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಫೋಟೋ ವಿಚಾರ ಹೇಳುತ್ತಿದ್ದೇನೆ, ಫೋಟೋ ಅಂಗಡಿಯಲ್ಲಿ ಮಾರಾಟ ಮಾಡುತ್ತಾರೆ.

ಅಧ್ಯಕ್ಷರು.—ಅವರೂ ಹೇಳಿದ್ದಾರೆ, ಇವರೂ ಹೇಳಿದ್ದಾರೆ, ತಾವೂ ಸಾಕಷ್ಟು ಹೇಳಿದ್ದೀರಿ, ಈಗ ಕ್ಲಾರಿಫಿಕೇಷನ್ ಏನಾದರೂ ಇದ್ದರೆ ಕೇಳಿರಿ.

ಶ್ರೀ ಎಸ್. ಬಂಗಾರಪ್ಪ.—ಈಗ ಒಂದು ಕಾಲವೂ ಹೋಯಿತು. ಮಹಾತ್ಮಾ ಗಾಂಧೀಜಿಯವರ ಕಾಲದಲ್ಲಿ ಎಲ್ಲರೂ ಬಿಳಿ ಟೋಪಿಯನ್ನು ಹಾಕಿಕೊಂಡಿರುತ್ತಿದ್ದರು. ಈಗಲೂ ಉತ್ತರ ಕರ್ನಾಟಕದ ಕಡೆ ಹಾಕುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರ ಮನೆತನಗಳು ನಮಗೆ ಆ ಕಡೆ ಹೆಚ್ಚು ಸಿಗುತ್ತವೆ. ಹಳೆಯ ಮೈಸೂರು ರಾಜ್ಯಕ್ಕಿಂತ ಹೆಚ್ಚಾಗಿ ಹೊಸ ಮೈಸೂರು ರಾಜ್ಯದ ಕಡೆ, ಉತ್ತರ ಕರ್ನಾಟಕದಲ್ಲಿ, ಅದೂ ಬಾಂಬೆ ಕರ್ನಾಟಕದ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಜಾಸ್ತಿ ಇದ್ದಾರೆ. ಅಲ್ಲಿ ಎಲ್ಲರೂ ಸಹ ಇಂದಿಗೂ ಬಿಳಿ ಟೋಪಿಯನ್ನು ಧರಿಸುತ್ತಾರೆ. ಏತಕ್ಕೆಂದರೆ ಅದೊಂದು ಸಿಂಬಲ್, ಮಹಾತ್ಮಾ ಗಾಂಧೀಜಿಯವರ ಹೋರಾಟವನ್ನು ನೆನಪು ಮಾಡಿಕೊಳ್ಳತಕ್ಕದ್ದು. ಮಹಾತ್ಮಾ ಗಾಂಧೀಜಿಯವರ ಬಗ್ಗೆ ಈಗಿರುವ ಯುವ ಪೀಳಿಗೆಯು ಗೌರವ ಕೊಡತಕ್ಕ ಒಂದು ಭಾವನೆಯುಂಟಾಗಲಿ ಎಂದು ಈ ಬಿಳಿ ಟೋಪಿಯನ್ನು ಹಾಕತಕ್ಕದ್ದು. ಮಹಾತ್ಮಾ ಗಾಂಧೀಜಿಯವರ ಫೋಟೋ ಎಲ್ಲಿದ್ದರೂ ಅದಕ್ಕೆ ಗೌರವ ತೋರಿಸುತ್ತೇವೆ. ಅವರು ಹುಟ್ಟಿದ ದಿನವನ್ನು ಆಚರಣೆ ಮಾಡುತ್ತೇವೆ. ಅದೇ ರೀತಿ ಮೊನ್ನೆಯ ದಿನ ಜನವರಿ ೩೦ ರಂದು ಅವರು ದಿವಂಗತರಾದ ದಿನವನ್ನು ಆಚರಣೆ ಮಾಡಿದ್ದೇವೆ. ಅದನ್ನು ಶೋಕ ದಿನವನ್ನಾಗಿ ಆಚರಣೆ ಮಾಡುತ್ತೇವೆ. ಇದನ್ನು ತಾವು ಅಲ್ಲಗಳೆಯುವುದಿಲ್ಲ ಇಲ್ಲಿರತಕ್ಕಂಥ ಪ್ರಶ್ನೆ, ಮಹಾತ್ಮಾ ಗಾಂಧೀಜಿಯವರ ಫೋಟೋ ಎಲ್ಲಿದ್ದರೂ ಅದಕ್ಕೆ ಗೌರವ ಕೊಡಬೇಕು. ಅದು ಸಭಾಂಗಣದ ಹತ್ತಿರ ಕೂಡಾ ಇರಲಿಲ್ಲ, ನಾವೂ ಕೂಡಾ ಹೋಗಿ ನೋಡಿದ್ದೇವೆ, ಅಡ್ವರ್ಟೈಸ್‌ಮೆಂಟ್ ಬೋರ್ಡ್ ಇದ್ದುದನ್ನು ನಾವೂ ಕೂಡಾ ನೋಡಿದ್ದೇವೆ, ಕಾಂಪೌಂಡ್ ಒಳಗಡೆ ಕಬ್ಬಿಣದ ಕಂಬ ನಿಲ್ಲಿಸಿ ಅದನ್ನು ಹಾಕಿರುತ್ತಾರೆ.

ಅಧ್ಯಕ್ಷರು.—ಆಯಿತು, ದಯವಿಟ್ಟು ಬೇಗ ಮುಕ್ತಾಯ ಮಾಡಿ.

2-00 ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಕಾಂಪೌಂಡ್ ಮೇಲೆ ಕಟ್ಟಿದ್ದ...

ಅಧ್ಯಕ್ಷರು.—ಬಂಗಾರಪ್ಪನವರೇ ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಆ ಫೋಟೋಗಳನ್ನು ಕೀಳುವಂತಹ ಅವಶ್ಯಕತೆ ಏನಿತ್ತು ? ಮತ್ತು...

ಅಧ್ಯಕ್ಷರು.—ತಾವು ಏನಾದರೂ ಸಲಹೆ ಕೊಡುವುದಾದರೆ ಕೊಡಿ. ಇಲ್ಲದಿದ್ದರೆ ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಸಲಹೆಯನ್ನು ಸಹ ಕೊಡುತ್ತೇನೆ. ಈಗ ಸರ್ಕಾರ ಮಾಡಿಸಿಲ್ಲವೆಂದು ಹೇಳುತ್ತಾರೆ. ಇನ್ನು ಯಾರು ಮಾಡಿದ್ದಾರೆ ? ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಆದರೆ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಮತ್ತು ಇತರೆ ಸದಸ್ಯರು ಕೇಳುತ್ತಿರುವುದು ಏನೆಂದರೆ Through what Agency you are going to get this matter enquired. That is the mut point. You never clarified it. ಆದ್ದರಿಂದ ನಾವು ಮತ್ತೆ

ಒತ್ತಾಯ ಮಾಡುವುದಕ್ಕೆ ಅವಕಾಶವಾಗಿದೆ. ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ ಉಭಯ ಸದನಗಳ ಸದಸ್ಯರೊಳಗೊಂಡಂತೆ ಒಂದು ಸಮಿತಿಯನ್ನು ಮಾಡಿ ಎಂದು. There is nothing wrong in accepting our suggestion. ವಿಷಯದ ಫ್ಯಾಕ್ಟ್ ಫೈಂಡಿಂಗ್ ಮಾಡಬೇಕಾಗುತ್ತದೆ. ಎರಡೂ ಸದನಗಳನ್ನು ಒಳಗೊಂಡಂತೆ ಒಂದು ಸಮಿತಿಯನ್ನು ತಾವು ಮಾಡಿದರೆ ಆಗ ಯಾರು ತಪ್ಪು ಮಾಡಿದ್ದಾರೆ, ಪೋಲೀಸಿನವರು ತಪ್ಪು ಮಾಡಿದ್ದಾರೋ ಅಥವಾ ಬೇರೆಯವರು ತಪ್ಪು ಮಾಡಿದ್ದಾರೋ ಎನ್ನುವ ಸತ್ಯಾಂಶ ಹೊರಗೆ ಬರುತ್ತದೆ, ಎರಡೂ ಸದನಗಳ ಸದಸ್ಯರ ಸಮಿತಿಯನ್ನು ಮಾಡಿ ಅವರಿಂದ ತಾವು ವರದಿಯನ್ನು ಪಡೆದು ತದನಂತರ ಯಾರು ತಪ್ಪಿತಸ್ಥರಿರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಇಲ್ಲದಿದ್ದರೆ ತಾವು ಸುಮ್ಮನೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ. ಅದು ನ್ಯಾಯ ಸಮ್ಮತವಾಗುವುದಿಲ್ಲ. ಆದ್ದರಿಂದ ತಾವು ದಯಮಾಡಿ ಒಪ್ಪಿಕೊಳ್ಳಿ. ತಾವು ಆಗಲೇ ಕೊಟ್ಟ ಉತ್ತರದ ಧಾಟಿಯನ್ನು ನೋಡಿದರೆ ಅಲ್ಲಿ ಏತಕ್ಕೆ ಇಡಬೇಕಾಗಿತ್ತು ಎಂದು ಪ್ರಶ್ನೆ ಮಾಡಿದ ರೀತಿಯಲ್ಲಿ ಇತ್ತು. ಅವರ ಅರ್ಥವೇನಾಗುತ್ತದೆಂದರೆ This pre-supposes that th Government is behind this incident in whih the partraits were torn out and removed ಆದ್ದರಿಂದ ತಾವು ದಯಮಾಡಿ ಎರಡೂ ಸದನಗಳ ಸದಸ್ಯರೊಳಗೊಂಡಂತೆ ಸಮಿತಿಯನ್ನು ಮಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ ರಾಜಕೀಯಕೋಸ್ಕರ ಈ ವಿಚಾರವನ್ನು ಎತ್ತತಕ್ಕಂಥಾದ್ದು ಅಲ್ಲ. ಇದು ಒಂದು ರಾಷ್ಟ್ರ ನೀತಿಗೆ ಸಂಬಂಧಪಟ್ಟಂತಹ ವಿಚಾರವಾಗಿರುವುದರಿಂದ ನಾವು ಈ ವಿಚಾರವನ್ನು ಇವತ್ತು ಪ್ರಸ್ತಾಪ ಮಾಡಬೇಕಾಗಿದೆ. ಈ ವಿಚಾರ ಈ ಕಡೆ ಕುಳಿತುಕೊಂಡಿರುವವರಿಗೆ ಆಗಲಿ ಅಥವಾ ಆ ಕಡೆ ಕುಳಿತುಕೊಂಡಿರುವವರಿಗೆ ಆಗಲಿ ಸಂಬಂಧಪಟ್ಟ ವಿಚಾರವಲ್ಲ. ಇದು ಒಂದು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರ, ಈ ರಾಷ್ಟ್ರಕ್ಕೆ ಪ್ರತಿಯೊಬ್ಬರು ಗೌರವ ಕೊಡತಕ್ಕಂಥಾದ್ದು ಆದ್ಯ ಕರ್ತವ್ಯ. ಇದರ ಬಗ್ಗೆ ಈಗಾಗಲೇ ಎಲ್ಲರೂ ವಿಷಾದ ಸೂಚಿಸಿರಬಹುದು. ತನಿಖೆಯನ್ನು ಮಾಡುತ್ತೇನೆಂದು ಹೇಳಿರಬಹುದು. ಆ ಪ್ರಶ್ನೆ ಇಲ್ಲಿ ಇಲ್ಲವೇ ಇಲ್ಲ. ಈಗ ಆಗಿರತಕ್ಕಂಥ ಘಟನೆ ನಡೆದಿರತಕ್ಕಂಥ ಘಟನೆ ಇಡೀ ಕರ್ನಾಟಕ ರಾಜ್ಯಕ್ಕೆ, ಇಡೀ ಕರ್ನಾಟಕದ ಹೆಸರಿಗೆ ಅವಮಾನ ಮಾಡಿದಂತೆ, ಮತ್ತು ಕಳಂಕ ತಂದಂತೆ. ಈ ವಿಷಯ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಅಥವಾ ಗೃಹಸಚಿವರಾಗಲಿ ಪತ್ರಿಕೆಗಳಿಗೆ ವಿಷಾದದ ಮಾತನ್ನು ಸೂಚಿಸಿದ್ದರೆ ನಾವು ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಈ ಒಂದು ಘಟನೆಯಿಂದ ಇಡೀ ರಾಷ್ಟ್ರಕ್ಕೆ ಅವಮಾನ ಮಾಡಿದಂತೆ ಆಗಿದೆ. ಮತ್ತು ಇಡೀ ರಾಷ್ಟ್ರಕ್ಕೆ ದ್ರೋಹ ಮಾಡಿದಂತೆ ಆಗಿದೆ. ಅನಾವಶ್ಯಕವಾಗಿ ಅಲ್ಲಿನ ಫೋಟೋಗಳನ್ನು ಕಿತ್ತಾಕಿದ್ದಾರೆ ಅಲ್ಲಿ ಟ್ರಾಫಿಕ್‌ಗೆ ಏನಾದರೂ ತೊಂದರೆಯಾಗುತಿದ್ದರೆ ಮೊದಲೇ ಟ್ರೇಡ್ ಯೂನಿಯನ್‌ರವರಿಗೆ ಲೈಸೆನ್ಸ್ ಕೊಡುತ್ತಿರಲಿಲ್ಲ. ಟ್ರೇಡ್ ಯೂನಿಯನ್‌ರವರು ಲೈಸೆನ್ಸ್ ಫೀ ಕೊಟ್ಟು ಲೈಸೆನ್ಸ್ ಪಡೆದುಕೊಂಡಿದ್ದಾರೆ.

ಅಧ್ಯಕ್ಷರು.—ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ ದಯಮಾಡಿ ಇಲ್ಲಿಗೆ ಈ ವಿಚಾರವನ್ನು ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಫೋಟೋಗಳು ಈ ರಾಷ್ಟ್ರದ ಭೂಪಟದಲ್ಲಿವೆ. ಆ ಫೋಟೋಗಳನ್ನು ಕಿತ್ತ ಮೇಲೆ ಇಡೀ ಮ್ಯಾಪ್‌ಗೆ ಅವಮಾನ ಮಾಡಿದಂತೆ ಮತ್ತು ಈ ದೇಶದ ನಕಾಶೆಗೆ ಅವಮಾನ ಮಾಡಿದಂತೆ. ಇದನ್ನು ಕ್ಯಾಶ್ಯುಯಲ್ ತೆಗೆದುಕೊಳ್ಳತಕ್ಕಂಥ ವಿಷಯವಲ್ಲ. ಆದ್ದರಿಂದ ಎರಡೂ ಸದನದ ಸದಸ್ಯರ ಒಂದು ಸಮಿತಿಯನ್ನು ಅವರು ನೇಮಕ ಮಾಡಲಿ. ಆ ಸಮಿತಿಯು ಇದರ ಬಗ್ಗೆ ವಿಚಾರ ಮಾಡಲಿ. ನಮ್ಮ ಕರ್ನಾಟಕ ರಾಜ್ಯ ಪಾಕಿಸ್ತಾನದಲ್ಲಿ ಇಲ್ಲ. ನಮ್ಮ ದೇಶದಲ್ಲಿರತಕ್ಕಂಥ ಒಂದು ರಾಜ್ಯವೆ ಕರ್ನಾಟಕವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕ ಜನರಿಗೆ ಹಾಗೂ ನಮ್ಮ ದೇಶದಲ್ಲಿರತಕ್ಕಂಥ ಜನರಿಗೆ ಈ ವಿಷಯದ ಬಗ್ಗೆ ಅನುಮಾನ ಬರಬಾರದು. ಮಾನ್ಯ ರಾಚಯ್ಯನವರೂ ಸಹ ದೇಶಭಕ್ತರೆಂಬುದು ನಮಗೆಲ್ಲಾ ಗೊತ್ತಿದೆ. ದೇಶದ ನಾಯಕರ ಬಗ್ಗೆ ನಮಗಿಂತಲೂ ಹೆಚ್ಚಿಗೆ ಗೌರವ ಅವರಿಗೆ ಇರಬಹುದು. ಆದ್ದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಿಸಬೇಕು. ಪೊಲೀಸಿನವರು, ಆ ಚಿತ್ರಗಳನ್ನು ಕೀಳುತ್ತಿರುವಾಗ ಫೋಟೋಗಳನ್ನು ತೆಗೆದಿದ್ದೇವೆಂದು ಹೇಳಿದ್ದಾರೆ. ಆ ಫೋಟೋ ರೀಲ್‌ಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಳ್ಳಬೇಕು. ಈ ಚಿತ್ರಗಳನ್ನು ಕೀಳುವಾಗ ಇದ್ದ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಬೇಕು. ಇದು ಸೌಜನ್ಯದ ಪ್ರಶ್ನೆಯಾಗಿದೆ. ಈ ಚಿತ್ರಗಳಿಂದ ಟ್ರಾಫಿಕ್‌ಗೆ ತೊಂದರೆಯಾಗುವಂತೆ ಇದ್ದಿದ್ದರೆ ಮೊದಲೇ ಸಂಬಂಧಪಟ್ಟ

ವರಿಗೆ ತಿಳಿಸಿ ಅದನ್ನು ಹಾಕಿಸಬಾರದಾಗಿತ್ತು. ಇದ್ಯಾವುದನ್ನೂ ಮಾಡದೇ, ಅಪಮಾನ ಮಾಡಬೇಕು ಎನ್ನುವ ದುರುದ್ದೇಶ ಇಟ್ಟುಕೊಂಡು ಮಾಡಿದಂಥ ಘಟನೆ ಇದಾಗಿದೆ. ಮಾನ್ಯ ರಾಚಯ್ಯನವರು ಅಥವಾ ಸರ್ಕಾರದವರು ವೈಯಕ್ತಿಕವಾಗಿ ವಿಷಾದ ವ್ಯಕ್ತಪಡಿಸುವುದಲ್ಲ, ಇಡೀ ಸರ್ಕಾರವೇ ಅಪಾಲಜಿ ಕೊಡಬೇಕಾದಂಥ ಪ್ರಸಂಗ ಬಂದಿದೆ. ಇದರ ಬಗ್ಗೆ ವಿಚಾರಣೆ ಮಾಡಲು ಸದನದ ಸಮಿತಿ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಸಿ.ಬಿ.ಐ. ನವರಿಗೆ ವಿಚಾರಣೆ ಮಾಡುವುದಕ್ಕೆ ಏರ್ಪಾಡು ಮಾಡಿ. ಇದರ ಬಗ್ಗೆ ಸವಿಸ್ತಾರವಾದ ಚಿತ್ರ ದೇಶದ ನಾಗರೀಕರಿಗೆ ಗೊತ್ತಾಗಬೇಕು. ಹಾಗೂ ಇದರ ಬಗ್ಗೆ ಜನರಲ್ಲಿರುವ ಸಂಶಯವನ್ನು ನಿವಾರಣೆ ಮಾಡಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಾನು ವೈಯಕ್ತಿಕದಾಗಿ ಅಲ್ಲದೆ ಗೃಹಮಂತ್ರಿಯಾಗಿಯೂ ಇವತ್ತು ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ್ದೇನೆ. ಪೋಲೀಸ್ ವರದಿ ಪ್ರಕಾರ ಈ ಚಿತ್ರಗಳು ಕೆಳಗೆ ಇಟ್ಟಿದ್ದರು, ಕೆಳಗೆ ಇಟ್ಟಿದ್ದರಿಂದ ಟ್ರಾಫಿಕ್‌ಗೆ ತೊಂದರೆಯಾಗುತ್ತಿದ್ದು, ಮತ್ತು ಬಹಳ ಬಸ್‌ಗಳು ಅಲ್ಲಿಗೆ ಹೋಗುತ್ತಿದ್ದುದರಿಂದ ಆ ಚಿತ್ರಗಳು ಕೆಳಗೆ ಬಿದ್ದವೆಂದು ಇದೆ.

SRI M. MALLIKARJUNA KHARGE.—Again he is committing the same mistake.

SRI B. RACHAIAH.—I am sorry. I am not committing any mistake.

(Interruptions)

ಶ್ರೀ ಬಿ. ರಾಚಯ್ಯ.—ಈ ಕೆಲಸ ಮಾಡುವಾಗ ಯಾವ ಅಧಿಕಾರಿಗಳು ಅಲ್ಲಿ ಇದ್ದರೋ ಅಂಥವರಿಗೆ ಶಿಕ್ಷೆ ಮಾಡುತ್ತೇವೆ. ಇದರ ಬಗ್ಗೆ ವಿಚಾರಣೆ ಮಾಡಲು ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡುತ್ತೇವೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಪೋಲೀಸ್ ಅಧಿಕಾರಿಯಿಂದಲೇ ಮಾಡಿಸಿದರೆ, ಅದೇ ಇಲಾಖೆಯವರು ಸರಿಯಾಗಿ ತನಿಖೆ ಮಾಡುವುದಿಲ್ಲವೆಂದು ಹೇಳುತ್ತೀರಿ. ಆದ್ದರಿಂದ, ಇನ್ನು ಮುಂದೆ ಇಂಥ ಘಟನೆ ಆಗಬಾರದು ಎನ್ನುವ ದೃಷ್ಟಿಯಿಂದ ಐ.ಎ.ಎಸ್. ಅಧಿಕಾರಿಯಿಂದ ತನಿಖೆ ಮಾಡಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಎಲ್ಲದಕ್ಕೂ ಸಿ.ಬಿ.ಐ. ತನಿಖೆಗೆ ಒಪ್ಪಿಕೊಳ್ಳುತ್ತೀರಿ. ಇದಕ್ಕೆ ಸಿ. ಬಿ. ಐ. ನವರು ಏಕೆ ಬೇಡ ಎನ್ನುತ್ತೀರಿ. ನಿಮಗೆ ಸಂಬಂಧಪಡದೇ ಇರುವ ವಿಷಯಕ್ಕೆ ತನಿಖೆ ಮಾಡಲು ಸಿ. ಬಿ. ಐ. ನವರಿಗೆ ಒಪ್ಪಿಸುತ್ತೀರಿ ನಿಮಗೆ ಸಂಬಂಧಪಡುವುದಾದರೆ ಮಾತ್ರ ಇಲ್ಲ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಯಾರು ತನಿಖೆ ಮಾಡಿದರೆ ಏನು ? ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆ ಮಾಡುವುದು ನನಗೆ ಸೇರಿದ್ದು. ಈ ಘಟನೆ ಬಗ್ಗೆ ನಾನು ವಿಷಾದ ವ್ಯಕ್ತಪಡಿಸಿದ್ದೇನೆ. ಈ ಘಟನೆಗೆ ಸಂಬಂಧಪಟ್ಟವರು ಯಾರೇ ಇರಲಿ, ಅವರ ಮೇಲೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ,

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ತನಿಖೆ ಮಾಡಿಸುವ ಧಾರ್ಷ್ಟ್ಯ ಉಳ್ಳವರು, ಸಿ.ಬಿ.ಐ. ನವರಿಂದಲೇ ತನಿಖೆ ಮಾಡಿ. ಐ.ಎ.ಎಸ್. ಅಧಿಕಾರಿಯಿಂದ ಏಕೆ ತನಿಖೆ ಮಾಡಿಸುತ್ತೀರಿ ? ತಪ್ಪು ಮಾಡಿದವರು ಯಾರೇ ಇರಲಿ ಅವರಿಗೆ ಶಿಕ್ಷೆಯಾಗಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈಗ ಇದರ ವಿಚಾರಣೆಗಾಗಿ ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ತಂದರೆ, ಅವರೂ ಕೂಡ ಒಬ್ಬ ಅಧಿಕಾರಿಯೇ ಆಗಿರುತ್ತಾರೆ. ನಮ್ಮ ಒತ್ತಡ ಯಾವ ವಿಷಯದಲ್ಲಿ ಇದೆ ಎಂಬುದನ್ನು ತಾವುಗಳು ಅರ್ಥ ಮಾಡಿಕೊಂಡಿಲ್ಲ. ಇದು ಬೇರೆ ಯಾರ ವಿಚಾರವೂ ಅಲ್ಲ. ಇದು ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧೀಜೀಯವರ ಮತ್ತು ನಮ್ಮ ರಾಷ್ಟ್ರದ ಪ್ರಧಾನಿ

ಯಿಯವರ ಭಾವಚಿತ್ರ ಸೇರಿದಂತೆ ಆಗಿರತಕ್ಕಂತಹ ವಿಚಾರವಾಗಿದೆ. ತಾವುಗಳು ಸಣ್ಣ ಸಣ್ಣ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆಗಳನ್ನು ಎಷ್ಟೋ ಮಾಡಿದ್ದೀರಿ. ಅದಕ್ಕೆ ನಾವು ಬೇಡ ಎಂದು ಅಡ್ಡಿ ಬರಲಿಲ್ಲ. ಕೆಲವು ಸಾರಿ ನಾವೇ ಕೇಳಿದ್ದೇವೆ. ಕೆಲವು ಸಾರಿ ನೀವೇ ಮಾಡಿಕೊಂಡಿದ್ದೀರಿ. ಈಗ ಮಹಾತ್ಮಾ ಗಾಂಧೀಜಿಯವರ ಚಿತ್ರಕ್ಕೆ ಆದಂತಹ ಅಪಮಾನಕ್ಕೆ ವಿಚಾರಣೆ ಮಾಡಲಿಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡುತ್ತೀರಿ ಎಂದು ಹೇಳುತ್ತೀರಲ್ಲ? ಅದರಿಂದ ಘನತೆ ಗೌರವ ಬರುವುದಿಲ್ಲ. ಈ ಬಗ್ಗೆ ವಿಚಾರಣೆ ಮಾಡಲು ದಯಮಾಡಿ ಸದನದ ಸಮಿತಿ ಮಾಡಲು ಒಪ್ಪಿಕೊಳ್ಳಿ. ಇಲ್ಲದಿದ್ದರೆ ಸಿ.ಬಿ.ಐ. ಎನ್‌ಕ್ವಯರಿಗಾದರೂ ಒಪ್ಪಿಕೊಳ್ಳಿ. ಅದಕ್ಕಿಂತ ಕಡಿಮೆ ಮಟ್ಟದ ವಿಚಾರಣೆಗೆ ಮಾತ್ರ ನಾವು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಅಧ್ಯಕ್ಷರೇ, ವಿರೋಧ ಪಕ್ಷದವರನ್ನು ತಾವುಗಳು ಗಣನೆಗೆ ತೆಗೆದು ಕೊಳ್ಳುವುದಾದರೆ, ಸದನದ ಸಮಿತಿಯನ್ನು ಅಥವಾ ಸಿ.ಬಿ.ಐ. ಎನ್‌ಕ್ವಯರಿಯನ್ನು ಮಾಡಲು ತಮ್ಮದು ಏನು ಗಂಟು ಹೋಗುತ್ತದೆ? ನೀವುಗಳು ಈಗಾಗಲೇ ಘಟನೆ ಬಗ್ಗೆ ನೊಂದು ವಿಷಾದ ವನ್ನು ಹೇಳಿದ್ದೀರಿ. ನನಗೆ ತಮ್ಮ ವಿಚಾರ ಗೊತ್ತು. ತಮ್ಮ ಕಳಕಳಿಯನ್ನೂ ಅರ್ಥ ಮಾಡಿ ಕೊಂಡಿದ್ದೇನೆ. ನೀವು ಇಂದಿರಾ ಗಾಂಧೀಜಿಯವರು ಸತ್ತಾಗ ಎಷ್ಟು ಅತ್ತಿದ್ದೀರಿ ಎಂದೂ ಅದನ್ನೂ ಕೂಡಾ ನಾನು ನೋಡಿದ್ದೇನೆ. ಆದರೆ ಈ ವಿಷಯದ ಬಗ್ಗೆ ನೀವು ಸುಮ್ಮನೆ ಇದ್ದೀರಿ. ಇದರಿಂದ ನಿಮಗೆ ಅಪಕೀರ್ತಿ ಬರುತ್ತದೆ. ವೇಶ್ಯೆಯ ಪಾಪ ಸನ್ಯಾಸಿಯ ಮೇಲೆ ಬಂದಂತೆ ಅಪವಾದ ನಿಮಗೆ ಬರುತ್ತದೆ. ಒಬ್ಬ ಪೋಲೀಸ್ ಅಧಿಕಾರಿಯೋ, ಒಬ್ಬ ಕಾನ್‌ಸ್ಟೇಬಲ್ಲೋ ಮಾಡಿದುದಕ್ಕೆ ತಾವುಗಳು ಗೃಹಮಂತ್ರಿಯಾಗಿ ಏಕೆ ಜವಾಬ್ದಾರರಾಗಬೇಕಾಗುತ್ತದೆ? ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಸಿ.ಬಿ.ಐ. ವಿಚಾರಣೆ ಮಾಡಿದ್ದೀರಿ. ಇದಕ್ಕೂ......

ಶ್ರೀ ಬಿ. ರಾಚಯ್ಯ.—ನಾನು ಈ ವಿಚಾರವನ್ನು ಗಂಭೀರವಾಗಿಯೇ ತೆಗೆದುಕೊಂಡಿದ್ದೇನೆ. ನಾನು ಈ ವಿಚಾರಣೆಗಾಗಿ ಮಾಡಿದುದನ್ನು ತಾವುಗಳು ಏಕೆ ಒಪ್ಪಬಾರದು......

ಶ್ರೀ ಕೆ. ಹೆಚ್. ಪಾಟೀಲ್.—ತಾವುಗಳು ಇಂತಹ ಒಂದು ಗಂಭೀರವಾದ ವಿಷಯಕ್ಕೆ ಸೂಕ್ತ ವಿಚಾರಣೆ ಮಾಡಲು ಒಪ್ಪಿಕೊಳ್ಳದಿದ್ದರೆ ನಾವು ಅದನ್ನು ಸಹಿಸಿಕೊಂಡು ಸದನದಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ದಯವಿಟ್ಟು ನಮ್ಮ ಕಳಕಳಿಯನ್ನು ಅರ್ಥಮಾಡಿಕೊಳ್ಳಬೇಕು. ಒಂದು ವೇಳೆ ಬೇಕಾದಂತಹ ಅನ್ಯಾಯವನ್ನು ತಡೆದುಕೊಳ್ಳಬಹುದು, ಆದರೆ ಒಬ್ಬ ಅಧಿಕಾರಿ ಈ ಮಟ್ಟದಲ್ಲಿ ಅವಮಾನ ಮಾಡಿದ್ದನ್ನು ನಾವು ಖಂಡಿತಾ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ಸೂಕ್ತ ತೀರ್ಮಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.......

ಶ್ರೀ ಎಂ. ವೀರಪ್ಪಮೊಯಿಲಿ.—ತಾವುಗಳು ಈಗ ಅಧಿಕಾರಿ ಮಟ್ಟದ ತನಿಖೆಗೆ ಆದೇಶ ಮಾಡು ತ್ತೀರಿ. ಹಾಗೆ ಮಾಡಿದ್ದಕ್ಕೆ ನೀವೇ ವಿಷಾದ ವ್ಯಕ್ತಪಡಿಸಬೇಕಾಗುತ್ತದೆ ಅಧಿಕಾರಿಗಳ ಮಟ್ಟದ ವಿಚಾರಣೆಯನ್ನು ಮಾಡಿಸಿದ ಮೇಲೆ ನಿಮ್ಮಿಂದ ಅವರು ಹಾಗೆ ಹೇಳಿದ್ದಕ್ಕೆ ಪುನಃ ವಿಷಾದವನ್ನು ವ್ಯಕ್ತ ಪಡಿಸುವ ರೀತಿಯಲ್ಲಿ ವಿಚಾರಣೆಯನ್ನು ಕೊಂಡೊಯ್ಯುತ್ತಾರೆ. ಹಾಗೆ ಆಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಐ.ಎ.ಎಸ್. ಅಧಿಕಾರಿಯೂ ಕೂಡ ಒಬ್ಬ ಉನ್ನತ ಅಧಿಕಾರಿ ಯಾಗಿರುತ್ತಾರೆ. ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್, ಇವರೆಲ್ಲರೂ ಮೊನ್ನೆ ಅರಮನೆ ಮೈದಾನದಲ್ಲಿ ನಡೆದ ಸಮಾರಂಭದ ಉಸ್ತುವಾರಿಯನ್ನು ನೋಡಿಕೊಂಡವರು. ಅಂಥಾದ್ದರಲ್ಲಿ ನೀವು ಗಳು ಒಬ್ಬ ಐ.ಎ.ಎಸ್. ಅಧಿಕಾರಿಯಿಂದ ವಿಚಾರಣೆ ಮಾಡಿಸುತ್ತೇನೆ ಎಂದು ಹೇಳಿದರೆ ಹೇಗೆ? ಸಣ್ಣ ಪುಟ್ಟ ಘಟನೆಗಳಿಗೂ ನ್ಯಾಯಾಂಗ ವಿಚಾರಣೆ ಎಂದ ಕೂಡಲೇ ಆಗಬಹುದು ಎಂದು ನೀವು ಹೇಳುತ್ತೀರಿ. ಮುಖ್ಯಮಂತ್ರಿಗಳು ಹೇಳುತ್ತಾರೆ. ನಿಮಗೂ ಕೂಡ ಗೊತ್ತಿಲ್ಲದ ಹಾಗೆ ಅವುಗಳು ಆಗುತ್ತವೆ. ಅಂಥಾದ್ದರಲ್ಲಿ ಇಂತಹ ಗಂಭೀರವಾದ ವಿಚಾರಕ್ಕೆ ನ್ಯಾಯಾಂಗ ತನಿಖೆ ಮಾಡಲು ತಮಗೆ ಏನು ತೊಂದರೆ ಇದೆ? ಇದು ಬಹಳ ಮುಖ್ಯವಾದಂತಹ ವಿಚಾರ.

ಅಧ್ಯಕ್ಷರು.—ಅವರು ಸೂಕ್ತ ರೀತಿಯಲ್ಲಿ ವಿಚಾರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಐ.ಎ.ಎಸ್. ಅಧಿಕಾರಿಯಿಂದ ಇಂತಹ ಮಹತ್ವದ ವಿಚಾರದ ಬಗ್ಗೆ ವಿಚಾರಣೆ ನಡೆಸುವುದು ಎಂದರೆ ಹೇಗೆ ಸಾಧ್ಯ? ಸಿ.ಬಿ.ಐ. ಎನ್‌ಕ್ವಯರಿ ಮಾಡಿ ಎಂದು ನಾವು ಕೇಳುತ್ತಿರುವುದು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ನಾನು ಈ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಸುಮ್ಮನೆ ಕೇಳುತ್ತಾ ಇದ್ದೆ. ವಿರೋಧ ಪಕ್ಷದ ನಾಯಕಿಯರೂ, ಖರ್ಗೆಯವರೂ ಹೇಳುತ್ತಿದ್ದರು. ಇದು ಬಹಳ ಗಂಭೀರವಾದ ವಿಷಯ. ನಮ್ಮ ರಾಷ್ಟ್ರನಾಯಕರ ಚಿತ್ರವನ್ನು ಇವತ್ತಿನ ದಿವಸ ಯಾರೋ ಕಿತ್ತುಹಾಕಿದ್ದಾರೆ ಆ ಮೂಲಕ ಅವಮಾನಿಸಿದ್ದಾರೆ. ಇದು ಸಾಧಾರಣವಾದ ವಿಷಯವಲ್ಲ. ಮಹಾಪರಾಧವದು. ಮಹಾತ್ಮ ಗಾಂಧಿಯವರದಷ್ಟೇ ಅಲ್ಲ, ಬೇರೆ ನಾಯಕರದನ್ನು ಮಾಡಿದರೂ ತಪ್ಪಾಗುತ್ತದೆ. ಇದರಲ್ಲಿ ರಾಜಕಾರಣಿಗಳ ಹೆಸರು ಬಂದಿದೆ. ಅವರೂ ಅದನ್ನು ಅಲ್ಲಗಳೆದಿದ್ದಾರೆ. ಗೃಹಮಂತ್ರಿಗಳು ವಿಷಾದವನ್ನೂ ಸೂಚಿಸಿದ್ದಾರೆ. ಆದರೆ ಇಲ್ಲಿ ಇನ್ನೂ ಸಂಶಯ ಅನುಮಾನಗಳಿವೆ. ಇವುಗಳನ್ನು ಒಂದು ಅಧಿಕೃತ ಅಥಾರಿಟಿ ಮೂಲಕ ವಿಚಾರಣೆ ನಡೆಸಬೇಕೇ ಹೊರತು ತಾವಾಗಲೀ, ಅವರಾಗಲೀ, ನಾನಾಗಲೀ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಬೆಂಗಳೂರಿನಲ್ಲೇ ಇದು ಮಾನ್ಯ ಮುಖ್ಯಮಂತ್ರಿಗಳ ಎದುರಿನಲ್ಲೇ ನಡೆದಿದೆ ಎಂದು ಹೇಳಲಾಗಿರುವಾಗ ಇದಕ್ಕೆ ಎನ್‌ಕ್ವಯರಿ ಮಾಡಿಸಲೇಬೇಕಾಗುತ್ತದೆ. ಇದಕ್ಕೆ ಸಿಬಿಐ ಎನ್‌ಕ್ವಯರಿಯೇ ಬೆಸ್ಟ್ ಎಂದು ನನಗನ್ನಿಸುತ್ತದೆ. ಇದರಿಂದ ಆಡಳಿತ ಪಕ್ಷದವರ ಮೇಲೂ ಇರುವ ಕ್ಲೌಡ್ಸ್ ಹೋಗುತ್ತದೆ. ಇದರಲ್ಲಿ ಇನ್ನೊಂದು ಪ್ರಶ್ನೆ ಇದೆ, ಯಾರೋ ಆಡಳಿತ ಪಕ್ಷದ ಕಡೆಯವರು ಹೊರಗಡೆ ಹೇಳುತ್ತಿದ್ದರಂತೆ, ವಿರೋಧ ಪಕ್ಷಗಳವರ ಕಡೆಯವರೇ ಇದನ್ನೆಲ್ಲಾ ಬೇಕಂತ ಮಾಡಿಸಿದ್ದಾರೆ ಎಂದು. ಅವರು ಅದನ್ನು ಇಲ್ಲಿ ಹೇಳಬೇಕಾಗಿತ್ತು. ನಾನು ಹೇಳುತ್ತೇನೆ, ಇದು ಸ್ವಲ್ಪ ಜಾಸ್ತೀನೇ ಆಯಿತು. ಆ ಕಡೆಯವರು ಹೀಗೆಲ್ಲ ಹಗುರವಾಗಿ ಮಾತನಾಡಬಾರದಿತ್ತು. ಏಕೆಂದರೆ ಜವಾಬ್ದಾರಿ ಅವರ ಮೇಲಿದೆ.

ಶ್ರೀ ಕೆ. ಮಲ್ಲಪ್ಪ.—ವಿರೋಧ ಪಕ್ಷಗಳವರಾದ ತಾವೇ ಇದನ್ನು ಏಕೆ ಮಾಡಿಸಬಾರದು ಹೇಳಿ ?

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ.—ಬಹಳ ಗಂಭೀರವಾದ ಆಪಾದನೆ ಮಾಡಿದ್ದಾರೆ. ದುಷ್ಕೃತ್ಯ ಮಾಡಿದವರು ನಮ್ಮ ಕಡೆಯವರೇ ಎಂದು ಆ ಕಡೆಯವರು ಹೇಳುತ್ತಿರುವಾಗ ಇದರ ಬಗ್ಗೆ ಸಿಬಿಐ ಎನ್‌ಕ್ವಯರಿ ಮಾಡಿಸಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಕಡೆಯವರು ಇದ್ದಾರೆಂದ ಮೇಲೆ ಸಿ. ಬಿ. ಐ. ತನಿಖೆ ಮಾಡಿಸಿ ಬಿಡಿ, ಇನ್ನೇಕೆ ಯೋಚನೆ ?

(ಗೊಂದಲ)

ಅಧ್ಯಕ್ಷರು.—ಗೃಹ ಸಚಿವರು ಆಗಲೇ ವಿಷಾದ ವ್ಯಕ್ತಪಡಿಸಿದ್ದಾರಲ್ಲ, ಇನ್ನೇನು ಬೇಕು ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಒಂದು ಸಣ್ಣ ಮಾತು. ಎನ್‌ಕ್ವಯರಿಗೆ ಒಪ್ಪಿರುವ ಸರ್ಕಾರ ಎಲ್ಲ ವಿರೋಧ ಪಕ್ಷಗಳ ಒತ್ತಾಯವಾದ ಸಿ. ಬಿ. ಐ. ಎನ್‌ಕ್ವೈಯರಿಗೇಕೆ ಒಪ್ಪುವುದಿಲ್ಲ ? We are not yielding then. You will have to remove us. We won't agree with any thing less than reference to the CBI.

MR. SPEAKER.—Let us go to the next.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ರಾಷ್ಟ್ರಪಿತನ ಫೋಟೋಗಳಿಗೆ ಅಲ್ಲಿ ಅಗೌರವ ತೋರಿ ಇಲ್ಲಿ ಸಭಾಂಗಣದಲ್ಲಿ ಅವರ ಫೊಟೋಗಳನ್ನು ಇಟ್ಟುಕೊಂಡು ಏನು ಮಾಡುವುದು? ರಾಜ್ಯಾಂಗಕ್ಕೆ ಅವಮಾನವಾಗಿದೆ. ಅದರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸುವ ನಾವು ಇಲ್ಲಿ ಕೆಲಸ ಮಾಡುವುದು ಹೇಗೆ ? ಇದರ ಬಗ್ಗೆ ವಿಚಾರ ಮಾಡಬೇಕು.

ಇದನ್ನು ತಾವು ಹೇಳಬೇಕು. ರಕ್ಷಣೆ ಮಾಡಬೇಕು. ಈ ಸದನದಲ್ಲಿ ಹೇಗೆ ಕಾರ್ಯಕಲಾಪ ನಡೆಸುವುದು, ಈ ಫೋಟೋಗಳನ್ನು ಏಕೆ ಇಟ್ಟುಕೊಳ್ಳುತ್ತೀರಿ, ಮಹಾತ್ಮಾ ಗಾಂಧಿ, ಜವಹರಲಾಲ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ......

(ಗೊಂದಲ)

SRI MR. SPEAKER.—I have done my duty as a speaker.

ಶ್ರೀ ಕೆ. ಹೆಚ್. ಪಾಟೀಲ್.—ತಮ್ಮ ನಿಷ್ಪಕ್ಷಪಾತದೊಳಗೆ ಯಾವ ತರಹದ ಸಂದೇಹವೂ ಇಲ್ಲ. ನಿಮ್ಮನ್ನು ಇದರಲ್ಲಿ ಇನ್‌ವಾಲ್ವ್ ಮಾಡಲು ನಮಗೆ ಇಷ್ಟವಿಲ್ಲ. ವಿರೋಧ ಪಕ್ಷದ ಸದಸ್ಯರಿಗೆ ಗುರುತರವಾದ ಹಕ್ಕು ಇದೆ. ಮಾನ್ಯ ಗೃಹ ಮಂತ್ರಿಗಳು ವೈಯುಕ್ತವಾಗಿ ಮತ್ತು ಸರಕಾರದ ಪರಿಯಿಂದ ವಿಷಾದ ವ್ಯಕ್ತಪಡಿಸಿದ್ದಾರೆ. ಇವರು ಮಾಡಿದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ಇವರ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆ, ಇನ್ನೊಂದು ಕಾಂಗ್ರೆಸ್‌ನವರು ಮಾಡಿದ್ದರೂ ಮಾಡಿರಬಹುದೆಂದು. ಇದೆ. ಅಂತಹ ದೇಶ ದ್ರೋಹಿಗಳು ನಮ್ಮಲ್ಲಿದ್ದರೆ ಅವರನ್ನು ಹೊರಗೆ ಹಾಕುವುದಕ್ಕೆ ಅನುಕೂಲವಾಗುತ್ತದೆ. ಸಿ.ಬಿ.ಐ. ಎನ್‌ಕ್ವೈರಿ ಮಾಡಿಸಿ. ಕಾಂಗ್ರೆಸ್ ಪಕ್ಷದಲ್ಲಿ ಕೆಟ್ಟ ಹುಳ ಇದ್ದರೆ ಅವರನ್ನು ನಮ್ಮ ಪಕ್ಷದಿಂದ ಹೊರಗೆ ಹಾಕುವುದಕ್ಕೆ ನಮಗೆ ಅವಕಾಶ ಮಾಡಿಕೊಡಿ. ಅದಕ್ಕಾಗಿ ಸಿ.ಬಿ.ಐ. ಎನ್‌ಕ್ವೈರಿ ಮಾಡುವುದು ಅಗತ್ಯ. ಅದನ್ನು ಮಾಡಿಸದಿದ್ದರೆ ನಾವು ಜನರಿಂದ ಆರಿಸಿ ಬಂದು ಏಕೆ ಇಲ್ಲಿ ಕುಳಿತಿರಬೇಕು.

SRI M. VEERAPPA MOILY.—We have taken oath in the name of the Constitution.

(ಗೊಂದಲ)

ಅಧ್ಯಕ್ಷರು.—ನಾನು ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಅವರು ಉತ್ತರ ಹೇಳಿದ್ದಾರೆ. ಸರಕಾರ ಒಪ್ಪದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ.

(ಈ ಹಂತದಲ್ಲಿ ೭–೮ ಜನ ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು ಮಾತನಾಡತೊಡಗಿದರು.)

ಅಧ್ಯಕ್ಷರು.—ನಾನು ತಮಗೆ ಅವಕಾಶ ಕೊಟ್ಟಿದ್ದೇನೆ. ಸರಕಾರದ ನಿಲುವು ಏನು ಎಂಬುದನ್ನು ಹೇಳಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ವಿಷಯ ಬಹಳ ಗಹನವಾದದ್ದು ನಮ್ಮ ಅಭಿಪ್ರಾಯವನ್ನು ತಾವೂ ಕೂಡ ಒಪ್ಪಿಕೊಂಡಿದ್ದೀರಿ, ಸರಕಾರ ಕೂಡ ಇದು ಹಗುರವಾದ ವಿಚಾರ ಅಲ್ಲವೆಂದು ಹೇಳಿಕೆ ಕೊಟ್ಟಿದೆ. ಗಹನತೆಗೆ ಹಾಗೂ ವಿಷಯದ ಪ್ರಾಮುಖ್ಯತೆಗೆ ಅನುಸಾರವಾದಂತಹ ಮಾತನ್ನು ಹಲವಾರು ಬಾರಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಮಹಾತ್ಮಾಗಾಂಧೀಜಿಯವರ ವಿಚಾರ ನಮ್ಮೆಲ್ಲರ ಗಹನತೆ, ಪ್ರಾಮುಖ್ಯತೆಯನ್ನು ಮೀರಿರತಕ್ಕಂತಹ ವಿಚಾರ. ಆ ವಿಚಾರದಲ್ಲಿ ತನಿಖೆ ಮಾಡಬೇಕೆಂದು ಒತ್ತಾಯ ಮಾಡಿದರೂ ಕೂಡ, ಈ ಒಂದು ಸಣ್ಣ ತನಿಖೆ ಮಾಡತಕ್ಕಂತಹ ಮಟ್ಟಕ್ಕೆ ಹೋದರೆ ಸರಕಾರದ ಪ್ರಾಮುಖ್ಯತೆ ಯಾವ ಮಟ್ಟಕ್ಕೆ ಹೊದೀತು. ಪ್ರಧಾನ ಮಂತ್ರಿಗಳು, ಹಿಂದಿನ ಪ್ರಧಾನ ಮಂತ್ರಿಗಳ ಭಾವಚಿತ್ರ ಕೂಡ ಇದರಲ್ಲಿ ಅಡಗಿದೆ. ಎಲ್ಲರೂ ಕೂಡ ರಾಷ್ಟ್ರದ ಸೇವೆ ಮಾಡಿಕೊಂಡು ಬಂದಂತಹವರೇ. ರಾಷ್ಟ್ರದ ಸೇವೆ ಮಾಡಿರತಕ್ಕಂತಹವರ ಪಟ್ಟಿ ಅದರಲ್ಲಿ ಅಡಗಿದೆ. ಮಾನ್ಯ ಅಧ್ಯಕ್ಷರನ್ನು ಇಕ್ಕಟ್ಟಿಗೆ ಸಿಕ್ಕಿಸುವುದು ಬೇಡ, ಅವರು ನಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದಾರೆ. ಅವರು ಹೇಳಿಕೆ ಕೊಟ್ಟಿದ್ದಾರೆ ನಾನು ಏನೂ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಈಗ ನಿಮಗೆ ಅವಕಾಶ ಕೊಟ್ಟಿದ್ದೇನೆ. I cannot compel the Government. I have also already given the ruling.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದು ಬಹಳ ದೊಡ್ಡ ವಿಚಾರವೆಂದು ನನಗನ್ನಿಸುತ್ತದೆ. ತಮ್ಮ ವೈಯುಕ್ತಿಕ ಅಭಿಪ್ರಾಯ ಹೇಳಬಹುದು ತಪ್ಪೇನೂ ಇಲ್ಲ. ಸದನ ಸಮಿತಿಯನ್ನು ನೇಮಿಸಿ ತನಿಖೆ ಮಾಡಿಸಿ ಎಂದು ಕೇಳಿದೆವು, ಸಿ.ಬಿ.ಐ. ಎನ್‌ಕ್ವೈರಿ ಮಾಡಿ ಎಂದು ಒತ್ತಡ ತಂದೆವು. ಈ ಬಗ್ಗೆ ದೊಡ್ಡ ತನಿಖೆಯಾಗಬೇಕಾಗುತ್ತದೆಂದು ನನ್ನ ಅಭಿಪ್ರಾಯ ಕೂಡ ಇದೆಯೆಂದು ಹೇಳಿದಿರಿ. ಮಹಾತ್ಮಾ ಗಾಂಧೀಜಿಯವರ ವಿಚಾರ ಕೂಡ ಇದರಲ್ಲಿ ಇದೆ.

ಅಧ್ಯಕ್ಷರು.—ನಾನು ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ಅವರು ಅನುಮತಿಯನ್ನು ನಿರಾಕರಣೆ ಮಾಡಿದ್ದಾರೆ. ದಯವಿಟ್ಟು ಇಲ್ಲಿಗೆ ಮುಕ್ತಾಯ ಮಾಡಿ. ಇನ್ನು ಬೇಕಾದರೆ ಅವರ ಹತ್ತಿರ ಹೋಗಿ ಕನ್‌ವಿನ್ಸ್ ಮಾಡಿ. ಇನ್ನು ಮುಂದಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿಗೆ ಹೋಗಿ ಅವರ ಹತ್ತಿರ ಮಾತನಡತಕ್ಕಂಥ ಪ್ರಶ್ನೆ ಆಗಿದ್ದರೆ ನಮ್ಮ ವಿರೋಧ ಪಕ್ಷದ ನಾಯಕಿಯವರು ಮತ್ತು ನಾವು ಈ ಪ್ರಶ್ನೆಯನ್ನು ಎತ್ತಬೇಕಾಗಿರಲಿಲ್ಲ. ಪಕ್ಕದಲ್ಲಿ ಕೂತುಕೊಂಡು ಮಾತನಾಡಿ ಎಂದು ಹೇಳುತ್ತೀರಿ.

ಅಧ್ಯಕ್ಷರು.—ನೀವು ಸಹಾ ಪಾರ್ಟ್ ಅಂಡ್ ಪಾರ್ಸಲ್ ಆಫ್ ದಿ ಗೌರ್ನಮೆಂಟ್.

ಶ್ರೀ ಎಸ್. ಬಂಗಾರಪ್ಪ.—ಬಹಳ ಒಳ್ಳೆಯ ಸಲಹೆ ಕೊಡುತ್ತೀರಿ, ಅವರ ಹತ್ತಿರ ಹೋಗಿ ಕುಳಿತುಕೊಂಡು ಮಾತನಾಡಿ ಎಂದು ಹೇಳುತ್ತೀರಿ. ಅದಕ್ಕೆ ತಮ್ಮ ಪರ್ಮಿಷನ್ ಬೇಕೇನು.

ಅಧ್ಯಕ್ಷರು.—ಆಯಿತು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಏನೇ ವಿಚಾರ ಇದ್ದರೂ ಕೂಡ ಅನುಮತಿಯನ್ನು ನಿರಾಕರಣೆ ಮಾಡಿದರೆ.......

ಅಧ್ಯಕ್ಷರು.—ಡಿಸಿಷನ್ ಕೊಡುವುದು ನನ್ನ ಕರ್ತವ್ಯ. ಆದ್ದರಿಂದ ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ಮುಂದಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಇದು ಮುಂದಕ್ಕೆ ಹೋಗುವುದು ಅಲ್ಲ.

(ಗೊಂದಲ)

ಇವತ್ತು ಪಾರ್ಲಿಮೆಂಟ್ ಇದೆ, ಶಾಸನಸಭೆ ಇದೆ, ಅಧ್ಯಕ್ಷರು ಇದ್ದಾರೆ, ಮಂತ್ರಿಗಳು ಇದ್ದಾರೆ, ಸರ್ಕಾರ ಇದೆ, ವಿರೋಧ ಪಕ್ಷ ಇದೆ, ಯಾವುದೇ ಪಕ್ಷ ಆದರೂ ಆಗಬಹುದು. ಎಲ್ಲರಿಗೂ ಹಕ್ಕು ಇದ್ದೇ ಇರುತ್ತದೆ. ಮಹಾತ್ಮಾಗಾಂಧಿಯವರಿಗೆ ಇಲ್ಲಿ ಯಾರು ಕೂಡಾ.......

(ಗೊಂದಲ)

ಆದ್ದರಿಂದ ಈ ಹಕ್ಕಿನ ವಿಚಾರದಲ್ಲಿ ಪ್ರಾಮುಖ್ಯತೆ ಇದೆ ಎಂದು ತಾವು ಕೂಡಾ ತಿಳಿದುಕೊಂಡಿದ್ದೀರಿ. ಐ. ಎ. ಎಸ್. ಆಫೀಸರ್‌ಗಳ ಕೈಯಲ್ಲಿ ವಿಚಾರಣೆ ಮಾಡಿಸಿದರೂ ಅವರವರ ಒಂದು ಹಕ್ಕಿನಲ್ಲಿ......

ಅಧ್ಯಕ್ಷರು.—ನಾಗರತ್ನಮ್ಮನವರೇ, ತಾವು ಸ್ಪೀಕರ್ ಆಗಿದ್ದವರು. ತಮಗೂ ಅನುಭವ ಇದೆ ಒಮ್ಮೆ ತೀರ್ಮಾನ ಆದಮೇಲೆ ಮತ್ತೆ ವಿಷಯವನ್ನು ಚರ್ಚೆ ಮಾಡಲಿಕ್ಕೆ ಏನು ಇದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರಗಳನ್ನು ಇಲ್ಲಿಗೇ ನಿಲ್ಲಿಸಿ ಮುಕ್ತಾಯ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯರು).—ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಕುಳಿತಿರುವುದು ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಕ್ಕೆ. ಅದಕ್ಕಾಗಿ ತಾವು ಅವಕಾಶ ಕೊಡಬೇಕು. ನೀವು ಹೇಳುವುದು ಮಂತ್ರಿಗಳು ವಿಷಾದ ವ್ಯಕ್ತಪಡಿಸಿಬಿಟ್ಟರೆ ಅಲ್ಲಿಗೆ ಮುಗಿದು ಹೋಗುತ್ತದೆಯೋ ? ಐ.ಎ.ಎಸ್. ಆಫೀಸರ್ ಕೈಯಲ್ಲಿ ವಿಚಾರಣೆ ಮಾಡಿಸುತ್ತೇವೆಂದು ಹೇಳಿದರು. ಆದರೆ ಮಲ್ಲಪ್ಪನವರು ಬಹಳ ದೊಡ್ಡ. ......

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ನೇರವಾಗಿ ಆಪಾದನೆ ಮಾಡುವಂಥ ಸಂದರ್ಭದಲ್ಲಿ......

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಾವು ದಯಮಾಡಿ ಕುಳಿತುಕೊಳ್ಳಬೇಕು. ಬಹಳ ದೊಡ್ಡದಾದ ಅಪವಾದವನ್ನು ಮಾಡಿದ್ದಾರೆ. ಆ ಕಡೆಯವರು ಅವರ ಸ್ಟೇಟಸ್‌ನ್ನು ಇಂಪ್ರೂವ್ ಮಾಡಿಕೊಳ್ಳುವುದಕ್ಕೋಸ್ಕರ ಮಾಡಿದ್ದಾರೆ ಎಂದು ಬಹಳದೊಡ್ಡ ಅಪವಾದವನ್ನು ಮಾಡಿದ್ದಾರೆ ನೀವು

ಯಾವ ಐ.ಎ.ಎಸ್. ಆಫೀಸರ್ ಕೈಯಲ್ಲಿ ಹೇಳಿದರೆ ಎನ್‌ಕ್ವೈರಿ ಮಾಡಿಸಿಕೊಳ್ಳುವುದಕ್ಕೆ ತಯಾರಿಲ್ಲ. ದಯವಿಟ್ಟು ತಾವು ನಮಗೆ ಸಹಾಯ ಮಾಡಬೇಕು. ನಮ್ಮ ಈ ಅಪವಾದವನ್ನು ಮತ್ತು ನಾವು ಇದರಿಂದ ವಿಮುಕ್ತರಾಗಬೇಕು. ನಾವು ವಿಮುಕ್ತರಾಗಬೇಕಾದರೆ ಸರಿಯಾದಂಥವರ ಕೈಯಲ್ಲಿ ಎನ್‌ಕ್ವೈರಿ ಮಾಡಿಸಬೇಕು. ನಾವು ವಿಮುಕ್ತರಾಗಬೇಕು. ನಾವು ಮಾಡಿದ ಪಕ್ಷದಲ್ಲಿ, ನಮ್ಮ ಕಡೆಯವರು ಮಾಡಿದ್ದ ಪಕ್ಷದಲ್ಲಿ ನಾವು ಒಂದು ಸೆಕೆಂಡ್ ಸಹಾ ಇಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ. ಇರಕೂಡದು. ದಯಮಾಡಿ ಒಂದು ವಿಚಾರಣೆಯನ್ನು ಮಾಡಿಸಬೇಕು. ಅದಕ್ಕೆ ತಕ್ಕ ವಿಚಾರಣೆಯನ್ನು ಮಾಡಿಸಬೇಕಾದರೆ ಹೌಸ್ ಕಮಿಟಿಯಿಂದಾಗಲೀ ಅಥವಾ ಸಿ. ಬಿ. ಐ. ನಿಂದಾಗಲೀ ಮಾಡಿಸಿದರೆ.......

(ಗೊಂದಲ)

ಎಂತಹ ಒಂದು ಅಪವಾದವನ್ನು ಮಾಡಿರುವುದು ಎಂದರೆ ನಾವು ತಲೆ ಕೊಡುವುದಕ್ಕೆ ಸಿದ್ಧರಿದ್ದೇವೆ. ವಿಚಾರಣೆಯನ್ನು ಮಾಡಿಸಲೇಬೇಕು. ನಮಗೆ ಸಹಾಯ ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಯಾರಿಗೂ ಮಾತನಾಡುವುದಕ್ಕೆ ಅಲೋ ಮಾಡುವುದಿಲ್ಲ. ಡಿಸ್ ಅಲೋ ಮಾಡಿದ್ದೇನೆ.

ಅಧ್ಯಕ್ಷರು.—ಸರ್ಕಾರ ಹೇಳುವುದನ್ನು ತಾವು ಒಪ್ಪುವುದು ಬಿಡುವುದು ತಮಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಏನೋ ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಈಗಾಗಲೇ ನಾನು ಆಲೋಚನೆ ಮಾಡಿದ್ದೇನೆ. ಮತ್ತೇನೂ ಆಲೋಚನೆ ಮಾಡಬೇಕಾದ್ದಿಲ್ಲ. ಈಗಾಗಲೇ ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಮತ್ತೆ ಹೇಳುವುದೇನೂ ಇಲ್ಲ.

೨–೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಇದರಿಂದ ಸರ್ಕಾರದ ಸ್ಪಷ್ಟ ಅಭಿಪ್ರಾಯ ಏನು ಅನ್ನುವುದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಅವರದ್ದೇ ಕೈವಾಡ ಇದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದನ್ನು ಇವರು ಮುಚ್ಚಿಟ್ಟುಕೊಳ್ಳುತ್ತಿದ್ದಾರೆ. ಇದರಲ್ಲಿ ಮಾಜಿ ಸಚಿವರೂ ಸೇರಿದ್ದಾರೆ. ಮಹಾತ್ಮಾ ಗಾಂಧಿ ಫೋಟೋ ಹಾಳಾದರೂ ಪರವಾಯಿಲ್ಲಾ, ಅದಕ್ಕೇನು ಚ್ಯುತಿ ಬಂದರೂ ಪರವಾಯಿಲ್ಲಾ ಅಂದರೆ ಅದನ್ನು ಒಪ್ಪತಕ್ಕಂಥಾ ವಿಚಾರ ಅಲ್ಲ. ಇದರಲ್ಲಿ ಪ್ರಮುಖವಾಗಿರತಕ್ಕಂಥಾ ಮಹಾತ್ಮಾ ಗಾಂಧಿಗೆ ಅಗೌರವ ಮಾಡತಕ್ಕಂಥಾ ವಿಚಾರ ಸೇರಿದೆ. ಆದುದರಿಂದ ಇದರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡುವುದಕ್ಕೆ ತಾವು ಒಪ್ಪದೇ ಹೋದರೆ ಬಹಳ ಕಷ್ಟವಾಗುತ್ತದೆ. ನಿಮ್ಮ ಹೇಳಿಕೆಯನ್ನು ಒಪ್ಪಿಕೊಂಡು ಹೋಗುವುದಕ್ಕೆ ನಾವು ಬಂದಿಲ್ಲ. ನೀವು ನಾವು ಹೇಳುವುದನ್ನು ಒಪ್ಪದೇ ಹೋದರೆ ಮುಂದಿನ ಕಾರ್ಯಕ್ರಮ ಏನು ಮಾಡಬೇಕು ಅನ್ನುವುದು ಸನ್ನಿಹಿತವಾಗಿದೆ. ಈಗಲೂ ಸರ್ಕಾರಕ್ಕೆ ನಾವು ಇನ್ನೊಮ್ಮೆ ಅವಕಾಶ ಕೊಡುತ್ತೇವೆ. ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಬುದ್ಧಿ ಹೇಳಿದರೂ ಪರವಾಯಿಲ್ಲ, ಇಲ್ಲವೇ ಅವರಿಗೆ ನೀತಿ ಹೇಳಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಹೇಳಿಕೆ ಕೊಟ್ಟಿರುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳೂ ಸಹ ಉತ್ತರ ಕೊಟ್ಟಿದ್ದಾರೆ. ನಾನು ರೂಲಿಂಗ್ ಸಹ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ. ಈ ಬಗ್ಗೆ ಗುರುತರವಾದ ನಮ್ಮ ಮೇಲೂ ಬಂದಿದೆ. ಒಂದು ಕಡೆ ಮಹಾತ್ಮಾ ಗಾಂಧಿ ಫೋಟೋವನ್ನು ಹರಿದು ಹಾಕಿರತಕ್ಕಂಥಾದ್ದು ಇನ್ನೊಂದು ಕಡೆ ಸರ್ಕಾರದವರೇ ಅದನ್ನು ಮಾಡಿಸಿದ್ದಾರೆ ಅಂತ ನಾವು ಏನು ಹೇಳಿದ್ದೇವೆ ಅದೂ ಒಂದು ಇದೆ. ಆದುದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕು ಎಂದು ಹೇಳಿದ್ದೇವೆ ಕಾರಣ ಇದರಲ್ಲಿ ಒಬ್ಬರು ಮಾಜೀ ಸಚಿವರೂ ಸಹ ಇನ್‌ವಾಲ್ವ್ ಆಗಿರುವುದರಿಂದ ಹೇಳಿದ್ದೇವೆ. ಇದರ ಬಗ್ಗೆ ಸರಿಯಾಗಿ ಎನ್‌ಕ್ವೈರಿ ಆಗಬೇಕಾದರೆ ಸಿ.ಬಿ.ಐ. ಒಂದರಿಂದಲೇ.

ಅಧ್ಯಕ್ಷರು.—ಅದರ ಬಗ್ಗೆ ಆಗಲೇ ಅವರು ಉತ್ತರ ಕೊಟ್ಟಿದ್ದಾರಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಡೆಪ್ಯೂಟಿ ಕಮಿಷನರಿಂದ ಎನ್‌ಕ್ವೈರಿ ಮಾಡಿಸಿದರೆ ಅದು ಸರಿಯೇ? ಅವರಿಂದ ನಮಗೆ ನ್ಯಾಯ ಸಿಗುತ್ತದೆಯೇ?

ಅಧ್ಯಕ್ಷರು.—ನಾಗರತ್ನಮ್ಮನವರೆ, ಈ ಬಗ್ಗೆ ತಾವು ಏನು ಹೇಳುತ್ತೀರಾ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಐ.ಎ.ಎಸ್. ಅಧಿಕಾರಿಗಳ ಕೈಯಲ್ಲಿ ತನಿಖೆ ಮಾಡಿಸಿಕೊಳ್ಳಬೇಕೇ?

ಅಧ್ಯಕ್ಷರು.—ಅವರ ಸ್ಟ್ಯಾಂಡ್ ಏನೆಂಬುದನ್ನು ಹೇಳಿದ್ದಾರೆ. ನಾನು ಸಹ ರೂಲಿಂಗ್ ಕೊಟ್ಟಿದ್ದಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅವರ ಈ ಸ್ಟ್ಯಾಂಡನ್ನು ಬಸ್ಟ್ಯಾಂಡ್‌ನಲ್ಲಿ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಮುಂದಿನ ವಿಷಯಕ್ಕೆ ಹೋಗಲು ತಾವು ಅವಕಾಶ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಐ.ಎ.ಎಸ್. ಅಧಿಕಾರಿಗಳ ಕೈಯಲ್ಲಿ ತನಿಖೆ ಮಾಡಿಸುವುದನ್ನು ಅಧ್ಯಕ್ಷರಾದ ತಾವೂ ಸಹ ಒಪ್ಪುತ್ತೀರಾ?

ಅಧ್ಯಕ್ಷರು.—ಈ ಬಗ್ಗೆ ಸರ್ಕಾರ ಏನು ಮಾಡಬೇಕೆಂಬುದನ್ನು ನಾನು ಹೇಳಿಕೊಡುವುದಕ್ಕಾಗುತ್ತದೆಯೇ? ಈ ಮನೆಯ ಅಧ್ಯಕ್ಷರಾಗಿ ಕೆಲಸ ಮಾಡಿ ಅನುಭವ ಪಡೆದ ವಿರೋಧಪಕ್ಷದ ನಾಯಕರಿಗೆ ಇದು ಗೊತ್ತಿಲ್ಲವೇ ?

SRI S. BANGARAPPA.—If the Government commits mistake you pull up this Government, ಈ ಬಗ್ಗೆ ತಾವು ಸರ್ಕಾರಕ್ಕೆ ಛೀಮಾರಿಹಾಕಬೇಕು.

ಶ್ರೀ ಬಿ. ರಾಚಯ್ಯ.—ಈ ಕೆಲಸವನ್ನು ಯಾರೇ ಮಾಡಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದೆ. ನಿಮ್ಮ ಅಧಿಕಾರಿಗಳೇ ಈ ಕೆಲಸ ಮಾಡಿದ್ದಾರೆಂದು ಹೇಳಿದಾಗ, ನಾನು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದೆ. ಯಾವ ಮಟ್ಟದಲ್ಲಿ ಎಂದು ಕೇಳಿದಾಗ, ಪೋಲೀಸ್ ಅಧಿಕಾರಿಗಳ ವಿಷಯದಲ್ಲಿ ಪೋಲೀಸರೇ ತನಿಖೆ ಮಾಡಿದರೆ ಅನುಮಾನ ಬರಬಹುದೆಂದು, ಸೀನಿಯರ್ ಐ.ಎ.ಎಸ್. ಅಧಿಕಾರಿಗಳ ಕೈಯಲ್ಲಿ ತನಿಖೆ ಮಾಡಿಸುತ್ತೇವೆಂದು ಹೇಳಿದೆ.

(ಗೊಂದಲ)

ಇದೊಂದು ಗಂಭೀರವಾದ ವಿಷಯವಾದ ಕಾರಣ ಈ ಬಗ್ಗೆ ಆ ಕಡೆಯವರಿಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ನನಗೂ ಇದೆ. ಇದನ್ನು ಸ್ವಲ್ಪ ಮಟ್ಟಿಗೆ ತೋರಿಸಿಕೊಟ್ಟಿದ್ದೇನೆ. ಇಷ್ಟಾದ ಮೇಲೂ ಸಹ ಇದನ್ನು ಇನ್ನೂ ಬಹಳ ದೂರ ಎಳೆದುಕೊಂಡು ಹೋಗಿ ರಾಜಕೀಯ ಮಾಡುವುದಾದರೆ ಅದಕ್ಕೆ ನಾವು ಬಗ್ಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಹೇಳಿದ್ದಾಗಿದೆ. ಮತ್ತು ನಾನು ರೂಲಿಂಗ್ ಕೊಟ್ಟಿದ್ದಾಗಿದೆ. ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಸಿ.ಬಿ.ಐ.ಗೆ ಅವರು ರೆಫರ್ ಮಾಡಲಿ. ಅವರು ತನಿಖೆ ಮಾಡುತ್ತಾರೆ. ಇದಕ್ಕೆ ಏತಕ್ಕೆ ಒಪ್ಪಬಾರದು ?

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಲ್ಲಪ್ಪನವರು ನಮ್ಮ ಮೇಲೆ ಚಾರ್ಜ್ ಮಾಡಿದ್ದಾರೆ. ಅದು ಕಡತಕ್ಕೆ ಹೋಗಿದೆ. ಬೇಕಾದರೆ ತಾವು ತೆಗೆಸಿ ನೋಡಬಹುದು. ನಾವು

ಅವರ ಮೇಲೆ ಚಾರ್ಜ್ ಮಾಡಿದ್ದೇವೆ. ಈ ಬಗ್ಗೆ ಐ.ಎ.ಎಸ್. ಅಧಿಕಾರಿಗಳ ಕೈಯಲ್ಲಿ ತನಿಖೆ ಮಾಡಿಸುವುದೇ ಸರಿ ಎಂದು ಅವರು ಹೇಳುವುದಾದರೆ ನಾವು ಮುಂದೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ರಾಜವರ್ಧನ್.—ತಾವು 'ಸರ್ಕಾರದ ಸ್ಟ್ಯಾಂಡ್ ಎಂದು ಹೇಳಿದ ಸಂದರ್ಭದಲ್ಲಿ ಮಾನ್ಯ ಬಂಗಾರಪ್ಪನವರು ಅದನ್ನು 'ಬಸ್ಟ್ಯಾಂಡ್' ಎಂದು ವ್ಯಾಖ್ಯಾನ ಮಾಡಿದ್ದು ಸರಿಯೇ?

(ಗೊಂದಲ)

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ ತಾವು ಮುಂದಿನ ಸಬ್ಜೆಕ್ಟ್‌ಗೆ ಹೋಗುವುದಕ್ಕೆ ಅವಕಾಶ ಕೊಡಬೇಕು. ಈಗ ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮ್ಮ ಮನ ಒಲಿಸಬೇಕು ಎಂದು ನಾವು ಮಾತ ನಾಡುತ್ತಾ ಇರುವುದಿಲ್ಲ.

ಅಧ್ಯಕ್ಷರು.—ಈಗ ಆ ವಿಷಯ ಮುಗಿದು ಹೋಗಿದೆ.

(ಗೊಂದಲ)

ಅಧ್ಯಕ್ಷರು.—ಈಗ ಯಾರಿಗೂ ಅಲೋ ಮಾಡುವುದಿಲ್ಲ, ನೀವು ಏನು ಹೇಳಿದರೂ ಪ್ರಯೋ ಜನವಿಲ್ಲ.

(ಗೊಂದಲ)

ಅಧ್ಯಕ್ಷರು.—ನನಗೆ ಮುಂದಿನ ವಿಷಯಕ್ಕೆ ಹೋಗಲಿಕ್ಕೆ ಅವಕಾಶ ಮಾಡಿಕೊಡಿ. ಈಗ ಆ ವಿಷಯ ಹೇಳುವ ಹಾಗಿಲ್ಲ. ಮಾನ್ಯ ಮಂತ್ರಿಗಳು ಅವರ ಸ್ಟ್ಯಾಂಡನ್ನು ಹೇಳಿದ್ದಾರೆ. ಈಗ ಆ ವಿಷಯ ಮುಗಿದ ಮಾತು. ನಾನು ಈಗ ಯಾರಿಗೂ ಅವಕಾಶಕೊಡುವುದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇಲ್ಲ. ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. ಈಗ ಕಾಲಿಂಗ್ ಅಟೆನ್‌ಷನ್.

ಶ್ರೀ ಧರ್ಮಸಿಂಗ್.—ಮಾನ್ಯ ಶ್ರೀನಿವಾಸ್‌ರವರಿಗೆ ಪಾಯಿಂಟ್ ಆಫ್ ಆರ್ಡರ್ ಹೇಳು ವುದಕ್ಕೆ ಅವಕಾಶಕೊಡಿ.

ಅಧ್ಯಕ್ಷರು.—ಶ್ರೀನಿವಾಸ್‌ರವರೇ ಕೇಳಿ. ವಿರೋಧಪಕ್ಷದ ನಾಯಕರು ಏನಿದ್ದಾರೆ ಅವರಿಗೆ ನನಗಿಂತ ಸಾಕಷ್ಟು ಅನುಭವ ಇದೆ. ಈಗ ನಿಮಗೂ ಅವಕಾಶ ಕೊಟ್ಟಿದ್ದೇವೆ, ಅವರಿಗೂ ಅವಕಾಶ ಕೊಟ್ಟಿದ್ದೇನೆ, ರೂಲಿಂಗ್ ಕೊಟ್ಟಿದ್ದೇನೆ. ನಾನು ರೂಲಿಂಗ್ ಕೊಟ್ಟಮೇಲೂ ಕೂಡ ಅವರು ಹೇಳಿದರು. ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಆಮೇಲೆ ನಾನು ಕಾಲಿಂಗ್ ಅಟೆನ್‌ಷನ್ ಕರೆದಿ ದ್ದೇನೆ, ಅದಕ್ಕೆ ಅವಕಾಶ ಕೊಡಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನನಗೆ ಒಂದು ಮಾತು ಹೇಳುವುದಕ್ಕೆ ಅವಕಾಶ ಕೊಡಿ ಕೊಟ್ಟರೆ ಆಕಾಶ ಕಳಚಿ ಬೀಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ದ್ದಾರೆ, ಏನು ಹೇಳುತ್ತಾರೋ ಕೇಳಿ.

ಅಧ್ಯಕ್ಷರು.—ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರೇ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ರೂಲಿಂಗ್ ಮೇಲೆ ಅಲ್ಲ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. There is no question of reconsidering at this stage. I have already given my ruling.

SRI K.H. SRINIVAS.—I have to convince in this House the hon. Minister. In order to upheld justice he should hear.

ಅಧ್ಯಕ್ಷರು.—ಅವರು ಒಪ್ಪಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ನಿಮ್ಮದು ಕಾಲಿಂಗ್ ಅಟೆನ್ಷನ್ ಇದೆ. ಅವನ್ನು ಕೇಳಿ. ಇದರ ಮೇಲೆ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಎಲ್ಲರಿಗೂ ಅವಕಾಶ ಕೊಟ್ಟಿದ್ದೀರಿ. ಧಾರಾಳ ಮನುಷ್ಯರು ನೀವು. ಏಕೆ ಇಷ್ಟು......

ಅಧ್ಯಕ್ಷರು.—ಸಾಧ್ಯವಿಲ್ಲ. ಕೊಡುವುದಿಲ್ಲ, ಪಾಯಿಂಟ್ ಇಲ್ಲ, ಆರ್ಡರೂ ಇಲ್ಲ. ಪಾಟೀಲರೇ, ಅವರು ಪಾಯಿಂಟ್ ಆಫ್ ಆರ್ಡರನ್ನು ಯಾವ ರೂಲಿಂಗ್ ಕೆಳಗೆ ಹೇಳುತ್ತಾರೋ ನೋಡಿ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ರಾಚಯ್ಯನವರು ಹಳಿತಪ್ಪಿಬಿಟ್ಟಿದ್ದಾರೆ. ಅವರಿಗೆ ಕನ್‌ವಿನ್ಸ್ ಮಾಡಬೇಕು ಎಂದು ಹೇಳುತ್ತಾರೆ. ತಮ್ಮ ರೂಲಿಂಗ್ ಬಗ್ಗೆ ತಕರಾರು ಇಲ್ಲ. ಮಾನ್ಯ ಶ್ರೀನಿವಾಸ್‌ರವರು ತಮ್ಮ ರೂಲಿಂಗನ್ನು ವಿರೋಧಿಸಿ ಮಾತನಾಡುವುದಿಲ್ಲ. ಆ ರೂಲಿಂಗನ್ನು ಅನುಸರಿಸಿ ಮಾನ್ಯ ರಾಚಯ್ಯನವರು ಏನು ಮಾಡಬೇಕು ಎನ್ನುವ ಕರ್ತವ್ಯವನ್ನು ಹೇಳುತ್ತಾರೆ. ಅವರು ಹೇಳುವುದನ್ನು ಕೇಳಿ. ನಮ್ಮ ಅಪೊಸಿಷನ್‌ನವರು ಇನ್ನೂ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳುವ ಬದಲು ಮಾನ್ಯ ರಾಚಯ್ಯನವರಿಗೆ ಕನ್‌ವಿನ್ಸ್ ಮಾಡಬೇಕು ಎಂದು ಹೇಳುತ್ತಿದ್ದಾರೆ ಹೇಳಲಿ.

ಅಧ್ಯಕ್ಷರು.—ಕನ್‌ವಿನ್ಸ್ ಮಾಡುತ್ತೀರಾ ಮಾಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಕೂಡ ಒಂದು ನಿಮಿಷ ಮಾತನಾಡು ವುದಕ್ಕೆ ಅವಕಾಶ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಅವರದ್ದು ಆದಮೇಲೆ ನನಗೂ ಕೂಡ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ರಾಜವರ್ಧನ್.—ಸ್ವಾಮಿ, ತಾವು ರೂಲಿಂಗ್ ಕೊಟ್ಟಮೇಲೆ ಮತ್ತೆ ಏತಕ್ಕೆ ಮಾತನಾಡುವು ದಕ್ಕೆ ಅವಕಾಶ ಕೊಡುತ್ತೀರಿ.

(ಗೊಂದಲ)

ಅಧ್ಯಕ್ಷರು.—ನಾನು ಯಾರಿಗೂ ಅವಕಾಶ ಕೊಡುವುದಿಲ್ಲ,

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಯಾರು ಅಧಿಕಾರದ ಹುದ್ದೆಯಲ್ಲಿ ಇರುತ್ತಾರೆ, ಅವರು ಹಠಮಾರಿತನಕ್ಕೆ ಬೀಳುವುದರಿಂದ ವಿರೋಧ ಪಕ್ಷದವರು ಅನಿವಾರ್ಯವಾಗಿ ಉಳಿದ ಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ. ಈ ಸಭೆಯಲ್ಲಿ ಸತ್ಯಾಗ್ರಹ ಮತ್ತು ಧರಣಿ ಮಾಡಲೇಬೇಕಾಗುತ್ತದೆ. ಕಾನೂನಿಗೆ ವಿರುದ್ಧವಾಗಿ ಹೋಗಬಾರದು, ಕಾನೂನಿಗೆ ಅನುಕೂಲವಾಗಿ ಹೋಗಬೇಕು. ನೀವು ಕೂಡ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞರಾಗಿದ್ದೇವೆ. ಮಾನ್ಯ ರಾಚಯ್ಯನವರು ಸಹ ಒಪ್ಪಿಕೊಂಡಿ ದ್ದಾರೆ. ಹೌಸ್ ಕಮಿಟಿ ಮಾಡುವುದರಿಂದಲೂ ಸಮಸ್ಯೆ ಬಗೆಹರಿಯುವುದಿಲ್ಲ. ಕೆ. ಹೆಚ್. ಪಾಟೀಲರ ಮೇಲೆ ಅಪಾದನೆ ಬಂದಿದ್ದು, ಅವರನ್ನೇ ಕಮಿಟಿಯಲ್ಲಿ ಹಾಕಿದರೆ ಹೇಗೆ ? ನಮ್ಮಗಳ ಮೇಲೆ ಆಪಾದನೆ ಬಂದಿರುವುದರಿಂದ, ಸಿ.ಬಿ.ಐ. ಇನ್‌ವೆಸ್ಟಿಗೇಷನ್ ಮಾಡಿಸಿದರೆ, ಇಬ್ಬರ ತಲೆಯ ಮೇಲಿರುವ ಆಪಾದನೆಯೂ ತಪ್ಪಿಹೋಗುತ್ತದೆ. ನಿಷ್ಪಕ್ಷಪಾತವಾಗಿ ವಿಚಾರಣೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಗಹನವಾದ ವಿಚಾರವನ್ನು ಚರ್ಚೆ ಮಾಡಬೇಕಾದರೆ, ಮಾನ್ಯ ಮುಖ್ಯ ಮಂತ್ರಿಗಳು ಸದನವನ್ನು ಬಿಟ್ಟು ಹೋಗಿರುವುದಕ್ಕೆ ಸೀರಿಯಸ್ ಆಗಿ ಅಬ್ಜೆಕ್ಷನ್ ಮಾಡಬೇಕಾಗುತ್ತದೆ. ಇಷ್ಟು ದೊಡ್ಡ ವಿಚಾರ ಚರ್ಚೆಯಾಗುವಾಗ ಸದನವನ್ನು ಬಿಟ್ಟು ಏತಕ್ಕೆ ಹೋದರು ?

ಶ್ರೀ ಧರ್ಮಸಿಂಗ್.—ಸಿ.ಬಿ.ಐ. ವಿಚಾರಣೆಯಾಗದ ಹೊರತು ಮುಂದಿನ ಕಾರ್ಯಕಲಾಪಗಳಿಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ನಾಗರತ್ನಮ್ಮನವರೇ, ಸ್ವಲ್ಪ ಹೇಳಿ.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಮ್ಮ ಮೇಲೆ ಗೂಬೆ ಕೂಡಿಸಿದ್ದಾರೆ. ಸಿ.ಬಿ.ಐ. ತನಿಖೆ ಮಾಡಲಿ, ನಮಗೆ ಚಿಂತೆ ಅನುಮಾನ ಇಲ್ಲ. ನಾವು ತಯಾರಾಗಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯಮಂತ್ರಿಗಳೇ ಬಂದರು, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು.—ನಾನು ಕೊಡುತ್ತೇನೆ, ತಾವು ಕೂಡಿರಿ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ತಾವು ರೂಲಿಂಗ್ ಕೊಟ್ಟಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಡಿ.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದವರು ಸಿ.ಬಿ.ಐ. ರೆಫರ್ ಮಾಡಿ, ಸದನದ ಸಮಿತಿಯನ್ನು ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂಬುದನ್ನು ಹೇಳಿ.

ಶ್ರೀಮತಿ ನಾಗರತ್ನಮ್ಮ.—ಅಧ್ಯಕ್ಷರೆ, ನಮ್ಮ ನಾಯಕರು ಇರಲಿಲ್ಲ, ಅವರಿಗೆ ವಿಚಾರ ಗೊತ್ತಿಲ್ಲ. ಈಗ ನಮ್ಮಲ್ಲಿ ಬಹಳ ಜನ ಸಿ.ಬಿ.ಐ. ಎನ್‌ಕ್ವಯಿರಿ ಮಾಡಿಸಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್ ಶ್ರೀನಿವಾಸ್.—ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆದರೆ ಐ ವಿಲ್ ಸಮರೈಸ್ ದಿ ಡಿಸ್‌ಕಷನ್. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಇರಲಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ತಾವು ಏನು ಹೇಳುವುದು ಗೊತ್ತು. ನಾನು ಎಲ್ಲಾ ಕೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇದ್ದಾರೆಂದು ಹೇಳಿದರು. ತಾವು ನಮ್ಮ ಭಾಷಣ ಅದು ಹೇಗೆ ಕೇಳಿದಿರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಕೌನ್ಸಿಲ್‌ನಲ್ಲಿ ಹೋಗಿ ಅಧ್ಯಕ್ಷರ ರೂಮ್‌ನಲ್ಲಿ ಕೇಳಿದೆ. ನನಗೆ ತುಂಬಾ ವಿಷಾದ ಆಗುತ್ತಿದೆ. ಕೆಲವು ರಾಷ್ಟ್ರನಾಯಕರ ಚಿತ್ರವನ್ನು ಅಲ್ಲಿ ಹಚ್ಚಿದ್ದರು. ಅದನ್ನು ಯಾರೋ ಕಿತ್ತು ಹಾಕಿದ್ದಾರೆ. ಇದೇ ತಾನೇ ವಿಷಯ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಪೋಲೀಸರು ಎಂದು ಹೇಳುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಇದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ, ಇದಕ್ಕೆ ಜ್ಯುಡಿಷಿಯಲ್ ಎನ್‌ಕ್ವಯಿರಿ ಮಾಡಬೇಕೇ ಹೇಳಿ, ಪ್ರತಿಯೊಂದಕ್ಕೂ ಸೆನ್ಸ್ ಆಫ್ ಪ್ರಮೋಷನ್ ಬೇಕು. ಇಂತಹ ಒಳ್ಳೆಯ ಅಧಿವೇಶನ ಇಡೀ ದೇಶದಲ್ಲಿಯೋ ಆಗಿಲ್ಲ, ಆಗಿದೆಯೋ ಹೇಳಿ.

(ಗೊಂದಲ)

ಈ ಅಧಿವೇಶನದಲ್ಲಿ ಸರ್ಕಾರ ಅತೀ ಎಚ್ಚರಿಕೆಯಿಂದ ಯಾವುದೇ ರೀತಿಯ ರಾಜಕೀಯ ಬರಬಾರದು ಎಂದು ಹೇಳತಕ್ಕ ದೃಷ್ಟಿಯಿಂದ ಮಾಡಿದ್ದೆವು. ನಾವು ಮಾನ್ಯ ನರಸಿಂಹರಾವ್ ಅವರನ್ನು ಕರೆಸತಕ್ಕ ಅಗತ್ಯ ಏನಿತ್ತು. ಡಾ|| ದಿಲ್ಲೋನ್ ಅವರಿಗೆ ಬರೆದಿದ್ದೆ, ಅದರೆ ಅವರು ನನಗೆ ರೋಮ್‌ನಲ್ಲಿ ಕಾನ್‌ಫರೆನ್ಸ್ ಇದೆ, ಬರಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು.

(ಗೊಂದಲ)

ರಾಜಕೀಯ ಹೊರತು ಏನೂ ಕಾಣುವುದಿಲ್ಲ, ಹೃದಯ ಬಿಚ್ಚಿ ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರಾಜಕೀಯ ಮಾಡಿದ್ದು, ಪಬ್ಲಿಸಿಟಿ ತೆಗೆದುಕೊಳ್ಳುವುದಕ್ಕೋಸ್ಕರ ಮಾಡಿರುವುದು, ಸ್ಟಂಟ್ ಮಾಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಈ ಮಾತನ್ನು ಪ್ರಧಾನಮಂತ್ರಿರಳವರಿಗೆ ಬರೆದು ತಿಳಿಸುತ್ತೇನೆ, ಅವರೇ ಒಪ್ಪಲಿ. ಈ ಒಂದು ಅಧಿವೇಶನದಲ್ಲಿ, ಸಮಾರಂಭದಲ್ಲಿ ರಾಜಕೀಯ ತರಬಾರದು, ಎಂದು ಮಾಡಿದ್ದೇವೆ. ಪಕ್ಷದ ದೃಷ್ಟಿಯಿಂದ ಮಾಡಿಲ್ಲ. ಯಾವುದೇ ದೃಷ್ಟಿಯಿಂದ ಪಕ್ಷ ಅಲ್ಲಿ ತರಲಿಲ್ಲ. ಈ ವೇದಿಕೆಯ ಮೇಲೆ ನಮಗೆ ಬೇರೆ ಫೋಟೋ ಹಾಕಲಿಕ್ಕೆ ಬರುತ್ತಿತ್ತು. ಆದರಿಂದ ಏನಾದರೂ ತಕರಾರು ಆಗಬಹುದು, ವಾದ ವಿವಾದ ಆಗಬಹುದು, ಎಂದು ಹಾಕಲಿಲ್ಲ. ಜವಾಹರಲಾಲ್ ನೆಹರೂ ಚಿತ್ರ ಹಾಕ ಬಹುದಾಗಿತ್ತು. ಸೋಷಿಯಲಿಸ್ಟ್, ಕಮ್ಯೂನಿಸ್ಟ್ ಅವರೂ ಇದ್ದರು. ನಾವು ರಾಷ್ಟ್ರಪಿತನ ಚಿತ್ರವನ್ನು ಮಾತ್ರ ಹಾಕಿದ್ದೆವು. ನಾವು ಜಯಪ್ರಕಾಶ ನಾರಾಯಣ್‌ರವರ ಚಿತ್ರವನ್ನು ಹಾಕುವುದಕ್ಕೆ ಆಗುತ್ತಿರಲಿಲ್ಲವೆ ? ಅವರ ಚಿತ್ರವನ್ನು ನಾವು ಏತಕ್ಕೆ ಹಾಕಲಿಲ್ಲ ಎಂಬುದು ನಿಮಗೆ ಗೊತ್ತೆ ? ಮಾನ್ಯ ಖಾರ್ಗೆಯವರು ಬಹಳ ಆವೇಶದಿಂದ ಮಾತನಾಡುತ್ತಿದ್ದಾರೆ. ಅವರು ಒಂದು ವಿಚಾರವನ್ನು ತಿಳಿದು ಕೊಳ್ಳಬೇಕು. ಯಾವುದೇ ಒಂದು ಭಿತ್ತಿ ಚಿತ್ರವನ್ನಾಗಲಿ, ಭಿತ್ತಿ ಪತ್ರವನ್ನಾಗಲಿ ರಸ್ತೆಯ ಪಕ್ಕದಲ್ಲಿ ಹಾಕಿದರೆ ಅದರ ಮೇಲೆ ಕೆಲವು ಜನರು ಸಗಣಿ ಹಾಕಬಹುದು, ಹರಿದು ಹಾಕಬಹುದು, ಅಥವಾ ಅದಕ್ಕೆ ಬೇರೆ ಇನ್ನೇನಾದರೂ ಮಾಡಬಹುದು, ಅದಕ್ಕೆಲ್ಲಾ ನಾವಾಗಲಿ, ನೀವಾಗಲಿ ತಯಾರಾಗಿರಬೇಕು. ಆರೀತಿ ಮಾಡುವುದು ಸರಿಯಲ್ಲವೆಂದು ಹೇಳುವುದಾದರೆ ಅದನ್ನು ನಮ್ಮ, ನಿಮ್ಮ ಮನೆಗಳಲ್ಲಿ ಹಚ್ಚಿ ಕೊಳ್ಳಬೇಕು......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಪ್ರಚೋದನೆ ಮಾಡುತ್ತಿದ್ದೀರಿ. ಅದು ಬೇಡ...

ಅಧ್ಯಕ್ಷರು.—ಖಾರ್ಗೆಯವರೆ, ಮೊದಲು ಅವರು ಹೇಳುವುದನ್ನು ಕೇಳಿರಿ. ತಾವು ಕೂತು ಕೊಳ್ಳಿರಿ. ಅವರು ಏನು ಹೇಳುತ್ತಾರೋ ಕೇಳಿ. ಮುಖ್ಯ ಮಂತ್ರಿಗಳು ಸಭೆಗೆ ಬರಬೇಕೆಂದು ಬಯಸಿದಿರಿ. ಅವರನ್ನು ಕರೆಸಿದ್ದೇವೆ. ಅವರು ಈಗ ಏನು ಹೇಳುತ್ತಾರೋ ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಚುನಾವಣೆ ಸಮಯದಲ್ಲಿಯೂ ಕೂಡ ನಾವು ರಾಷ್ಟ್ರ ನಾಯಕರ ಭಿತ್ತಿ ಚಿತ್ರಗನಳ್ನು ಹಾಕಿದ್ದೆವು. ಸಾಮಾನ್ಯವಾಗಿ ಯಾವುದೇ ಪಕ್ಷದವರಾಗಲಿ ಅವರ ಪಕ್ಷದವರೂ ಹಾಕುತ್ತಾರೆ. ನಮ್ಮ ಪಕ್ಷದವರೂ ಹಾಕುತ್ತೇವೆ, ಮತ್ತು ಬೇರೆ ಪಕ್ಷಗಳವರೂ ಹಾಕುತ್ತಾರೆ. ಆದರೆ ಆ ಭಿತ್ತಿಚಿತ್ರಗಳ ಗತಿ ಏನಾಗುತ್ತದೆಂದು ನಮಗೆಲ್ಲರಿಗೂ ಗೊತ್ತಿದೆ. ದಿನನಿತ್ಯ ನೋಡುತ್ತಿದ್ದೇವೆ. ಅದು ಮಹಾತ್ಮಾ ಗಾಧೀಜಿಯವರ ಚಿತ್ರವಾಗಿರಬಹುದು, ಶ್ರೀಮತಿ ಇಂದಿರಾಗಾಂಧಿಯವರ ಚಿತ್ರ ವಾಗಿರಬಹುದು, ಅಥವಾ ರಾಜೀವ್ ಗಾಧಿಯವರ ಚಿತ್ರವಾಗಿರಬಹುದು ; ಇಲ್ಲವೇ ಮಾನ್ಯ ಚಂದ್ರಶೇಖರ್‌ರವರ ಚಿತ್ರವೇ ಆಗಿರಲಿ, ಬೇರೆ ಯಾರದ್ದೇ ಆಗರಲಿ ಇವತ್ತು ಹಾಕದರೆ ಅದು ಯಾವಾಗಲೂ ಹಾಗೆಯೇ ಶಾಶ್ವತವಾಗಿರುತ್ತದೆಯೆ ? ನಾನು ಈ ಮಾತನ್ನು ಹೇಳಿದರೆ ನೀವು ಏನು ಮಾಡುತ್ತೀರಿ, ನನ್ನ ಮೈಮೇಲೆ ಬೀಳುತ್ತೀರಿ. ಈ ಭಿತ್ತಿ ಚಿತ್ರಗಳನ್ನು ಹರಿಯುವುದರಲ್ಲಿ ಕಾಂಗ್ರೆಸ್ ನವರು ನಿಷ್ಣಾತರಾಗಿದ್ದಾರೆ. ಇದು ನನಗೆ ಗೊತ್ತು......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಆ ಜನಗಳೆಲ್ಲಾ ಕಾಂಗ್ರೆಸ್ ಪಾರ್ಟಿಯನ್ನು ಬಿಟ್ಟು ನಿಮ್ಮ ಜನತಾ ಪಕ್ಷಕ್ಕೆ ಬಂದುಬಿಟ್ಟಿದ್ದಾರೆ. ನಮ್ಮ ಕಡೆಯಾರೂ ಇಲ್ಲ.......

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ನೀವು ಕೂತು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಭಿತ್ತಿ ಚಿತ್ರವನ್ನು ನಾವು ಹರಿದಿದ್ದೇವೋ, ನೀವು ಹರಿದ್ದಿದ್ದೀರೋ ಎನ್ನುವ ಬಗ್ಗೆ ಸಿ. ಬಿ. ಐ. ಎನ್‌ಕ್ವೈರಿ ಆಗಲಿ.

ಅಧ್ಯಕ್ಷರು.—ದಯವಿಟ್ಟು ನೀವು ಕೂತು ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಹರಿಯುತ್ತಿದ್ದವರು ಈಗ ಕಾಂಗ್ರೆಸ್ ಪಕ್ಷ ಬಿಟ್ಟು ಜನತಾ ಪಕ್ಷಕ್ಕೆ ಹೋಗಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು, ಕೆಟ್ಟವರೆಲ್ಲಾ ಈಕಡೆ ಬಂದಿದ್ದಾರೆ, ಒಳ್ಳೆಯವರೆಲ್ಲಾ ಆ ಕಡೆ ಹೋಗಿದ್ದಾರೆ. ಈಗ ನಿಮ್ಮಕಡೆ ಎಲ್ಲಾ ಒಳ್ಳೆಯವರೇ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗಿರತಕ್ಕ ಕಾಂಗ್ರೆಸ್‌ನವರಲ್ಲಿ ನೀವು ಹೋಗುವಾಗ ಅವರನ್ನೂ ನಿಮ್ಮ ಜೊತೆಯಲ್ಲೇ ಕರೆದುಕೊಂಡು ಹೋಗಿಬಿಟ್ಟಿದ್ದೀರಿ.

ಅಧ್ಯಕ್ಷರು.—ಅವರು ಹೇಳುವುದನ್ನು ಕೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವೆಲ್ಲರೂ ಸಂಭಾವಿತರಿದ್ದೀರಿ, ಬಹಳ ಸಂತೋಷ. ಈಗ ಅದು ಬೇಡ. ಅದುದಾದರೂ ಏನು ? ಒಂದು ಸಣ್ಣ ಘಟನೆ. ಅದು ಆಗಬಾರದಿತ್ತು, ಆಗಿದೆ. ಅದನ್ನು ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಹಿಂದೆ ಶಿವಾಜಿ ಚಿತ್ರದ ಮೇಲೆ ಪಾದರಕ್ಷೆಗಳನ್ನು ಹಾಕಿದರು ಎಂದು ಒಂದು ಸುದ್ದಿ ಬಂದಿತ್ತು. ಆ ಕಡೆಯವರು ಏನಾದರೂ ಈ ಕೃತ್ಯವನ್ನು ಮಾಡಿದ್ದಾರೋ ಅಥವಾ ಬೇರೆಯವರು ಮಾಡಿದ್ದಾರೋ ನೋಡೋಣ. ಬುದ್ಧಿ ಇರುವವರು ಯಾರಾದರೂ ಕಾಲಲ್ಲಿ ಒದೆಯುತ್ತಾರೆಯೇ ? ಬುದ್ಧಿ ಇರುವವರು ಯಾರೂ ಈ ಕೆಲಸವನ್ನು ಮಾಡುವುದಿಲ್ಲ. ಕಾಲಲ್ಲಿ ಒದ್ದರೆ ಏನು ಬರುತ್ತದೆ ? ನಾನು ಈಗಾಗಲೇ ಹೇಳಿದಂತೆ ಮಾನ್ಯ ಗೃಹಸಚಿವರು ಈ ಘಟನೆ ನಡೆದಿದ್ದರ ಬಗ್ಗೆ ಕ್ಷಮಾಪಣೆ ಕೇಳಿಕೊಂಡಿದ್ದಾರೆ. ಆದರೆ ಅವರು ಕ್ಷಮಾಪಣೆಯನ್ನು ಕೇಳತಕ್ಕ ಅಗತ್ಯವಿರಲಿಲ್ಲ. ಆದರೂ ದೊಡ್ಡ ಮನಸ್ಸಿನಿಂದ ಅವರು ಕ್ಷಮಾಪಣೆಯನ್ನು ಕೇಳತಕ್ಕ ಅಗತ್ಯವಿರಲಿಲ್ಲ. ಆದರೂ ದೊಡ್ಡ ಮನಸ್ಸಿನಿಂದ ಅವರು ಕ್ಷಮಾಪಣೆ ಕೇಳಿಕೊಂಡು ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದಾರೆ. ಇದಕ್ಕಿಂತ ಇನ್ನೇನು ಮಾಡಬೇಕು ? ಒಂದುವೇಳೆ ಇದಕ್ಕಿಂತ ಮಹತ್ವದ ವಿಷಯ ಬಂದರೆ ಆಗ ನೀವು ಆಗ್ರಹ ಮಾಡಿ. ಇದನ್ನು ಸಿ. ಬಿ. ಐ. ನಿಂದ ತನಿಖೆ ಮಾಡಿಸಬೇಕೆ ? ಇದು ತನಿಖೆಗೆ ಯೋಗ್ಯವಾದ ವಿಚಾರವೆ ?

೩–೦೦ ಪಿ. ಎಂ.

ಸುಪ್ರೀಮ್ ಕೋರ್ಟ್ ಜಡ್ಜ್ ರವರಿಂದ ತನಿಖೆ ಮಾಡಿಸುವ ಒಂದು ಘಟನೆ ಇದ್ದರೂ ಇದು ಆದದ್ದು ಆಗಿ ಹೋಯಿತು. ಅದಕ್ಕಾಗಿ ಕ್ಷಮಾಪಣೆಯನ್ನು ಕೇಳಿ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆದಕ್ಕಾಗಿ ಇಷ್ಟಕ್ಕೆ ಇದನ್ನು ಮುಗಿಸಬೇಕು. ಈಗಾಗಲೇ ಇದರ ಬಗ್ಗೆ ಎಷ್ಟೋ ಸಮಯ ಖರ್ಚಾಗಿದೆ. ಇದಕ್ಕಿಂತಲೂ ಹೆಚ್ಚಿನ ಸಮಯವನ್ನು ಖರ್ಚುಮಾಡುವುದು ಬೇಡ. ದಯವಿಟ್ಟು ಇದಕ್ಕೆ ಒಪ್ಪಿಕೊಳ್ಳಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಈ ಚರ್ಚೆ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇರಲಿಲ್ಲ. ಪ್ರಶ್ನೆ ಏನಾಗಿದೆ ಎಂದರೆ ಈವತ್ತು ಆ ಕಡೆ ಸದಸ್ಯರು ಆಪಾದನೆ ಮಾಡುತ್ತಿದ್ದಾರೆ, ಈ ಕಡೆ ಕುಳಿತವರು ಆಪಾದನೆಯನ್ನು ಮಾಡುತ್ತಿದ್ದಾರೆ. ಕಣ್ಣಾರೆ ಕಂಡವರು ಎದುರುನಿಂತು ಕೇಳತಕ್ಕಂಥ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಈಗ ತನಿಖೆ ಮಾಡಲು ಐ. ಎ. ಎಸ್, ಆಫೀಸರನ್ನು ಎನ್‌ಕ್ವರಿ ಮಾಡಲು ಹಾಕುತ್ತೇವೆಂದು ಹೇಳಿದ್ದೀರಿ. ಅವರು ನಿಯಮಾವಳಿಯಂತೆ ಎನ್‌ಕ್ವಯರಿ ಮಾಡುತ್ತಾರೆ. ಯಾವುದು ಸರಿ ಯಾವುದು ತಪ್ಪು ಎಂದು ಕಂಡುಹಿಡಿಯಬೇಕಾದರೆ ನೇರವಾಗಿ ಸಿ. ಬಿ. ಐ. ಗೆ ರೆಫರ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ, ಐ. ಎ. ಎಸ್. ಆಫೀಸರ್ ಬಂದರೆ ಏನು ಮಾಡುತ್ತಾರೆ. ಡೆಪ್ಯುಟಿ ಕಮಿಷನರ್‌ಮೇಲೆ ಎನ್‌ಕ್ವಯರಿ ಮಾಡುತ್ತಾರೆ. ಅಲ್ಲೂ ಅದೇ ಲೆವಲ್‌ನಲ್ಲಿ ಆಗುವುದು ಬೇಡ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ರಾಷ್ಟ್ರ ನಾಯಕರ ಚಿತ್ರವನ್ನು ಯಾರು ತೆಗೆದರು ಯಾರು ಬಿಟ್ಟರು ಎನ್ನುವ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆಗಿದ್ದು ಆಗಿಹೋಗಿದೆ, ಅದಕ್ಕೆ ವಿಷಾದ ವ್ಯಕ್ತಪಡಿಸಿದ್ದೇನೆ. ಮತ್ತು ಮುಂದೆ ಇದರ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆ. ಯಾವ ಪೋಲೀಸ್ ಅಧಿಕಾರಿಗಳೇ ಇರಲಿ ಅವರು ಮೇಲಿನವರೇ ಇರಲಿ, ಕೆಳಗಿನವರೇ ಇರಲಿ ಐ. ಎ. ಎಸ್. ಆಫೀಸರಿಂದ ಎನ್‌ಕ್ವಯರಿ ಮಾಡಿಸುತ್ತೇನೆ. ಆದ್ದರಿಂದ ಇದನ್ನು ಮತ್ತಷ್ಟು ದೂರ ತೆಗೆದುಕೊಂಡು ಬೆಳೆಸಿಕೊಂಡು ಹೋಗುವುದು ಬೇಡವೆಂದು ಕೇಳಿಕೊಳ್ಳುತ್ತೇನೆ, ಇದು ಆಗಬಾರದಾಗಿತ್ತು ಆಗಿ ಹೋಯಿತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಎಷ್ಟು ವಿವರವಾಗಿ ಹೇಳಿ ಮನಒಲಿಸುವುದಕ್ಕೆ ಪ್ರಯತ್ನ ಪಟ್ಟರೂ ಆಗಲಿಲ್ಲ. ಸದಸ್ಯರು ಮಾಜಿ ಮಂತ್ರಿಗಳ ಮೇಲೆ ಹೇಳಿದ್ದಾರೆ. ಒಟ್ಟಾರೆ ನಮ್ಮ ಎಲ್ಲರ ಮೇಲೆ ಹೇಳಿದ್ದಾರೆ. ಆದ್ದರಿಂದ ಇದು ಐ. ಎ. ಎಸ್. ಅಧಿಕಾರಿಗಳನ್ನು ನೇಮಿಸಿ ತನಿಖೆ ಮಾಡತಕ್ಕಂಥ ವ್ಯವಹಾರವಲ್ಲ. ಐ. ಎ. ಎಸ್. ಅಧಿಕಾರಿಗಳಿಂದಲೇ ತನಿಖೆ ಮಾಡಿಸುತ್ತೇವೆಂದು ಹೇಳಿದರೆ ದಯವಿಟ್ಟು ಅದಕ್ಕೆ ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ನಿಟ್ಟಿನಲ್ಲಿ ವಿರೋಧಪಕ್ಷದ ನಾಯಕರೊಂದಿಗೆ ಎಲ್ಲ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಗಮನ ಸೆಳೆಯುವ ಸೂಚನೆ

ಸರೋಜಿನಿ ಮಹಿಷಿಯವರ ಸಮಿತಿಯ ವರದಿ ಮತ್ತು ಶಿಫಾರಸ್ಸುಗಳು

ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಸರೋಜಿನಿ ಮಹಿಷಿಯವರ ಸಮಿತಿಯು ಸರ್ಕಾರಕ್ಕೆ ಕೊಟ್ಟ ವರದಿ ಹಾಗೂ ಶಿಫಾರಸುಗಳ ಮೇರೆಗೆ ಸರ್ಕಾರದವರು ಕೈಗೊಂಡ ತೀರ್ಮಾನದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡ ಬಯಸುತ್ತೇನೆ.

ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿ ಮತ್ತು ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಇರುವ ಉದ್ಯೋಗಾವಕಾಶದ ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಈ ಸಂಸ್ಥೆಗಳಲ್ಲಿರುವ ಕರ್ನಾಟಕದ ನೌಕರರ ಸಮಸ್ಯೆ ಹಾಗೂ ಕೊರತೆಗಳನ್ನು ವಿಚಾರಿಸಿ ತಿಳಿದು ಅವುಗಳಿಗೆ ಪರಿಹಾರ ಒದಗಿಸುವ ಸೂಕ್ತ ಶಿಫಾರಸುಗಳನ್ನು ಮಾಡಲು ಸರ್ಕಾರವು ದಿನಾಂಕ ೪-೮-೮೩ ರಂದು ಡಾ॥ ಸರೋಜಿನಿ ಮಹಿಶಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ದಿನಾಂಕ ೨೫-೧-೮೪ ರಂದು ಅಸ್ಥಿತ್ವಕ್ಕೆ ಬಂದು ದಿನಾಂಕ ೧೩-೬-೮೪ ರಂದು ಒಂದು ಮಧ್ಯಕಾಲೀಕ ವರದಿಯನ್ನು ಸಲ್ಲಿಸಿತು.

ಮಧ್ಯಕಾಲಿಕ ವರದಿಯಲ್ಲಿರುವ ೭ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ ಮತ್ತು ಸಂಬಂಧಪಟ್ಟ ಇಲಾಖೆ ಸೂಕ್ತ ಆದೇಶವನ್ನು ಹೊರಡಿಸಿವೆ.

ದಿನಾಂಕ ೨೮-೬-೮೫ ರಂದು ಸಮಿತಿಯ ಕಾರ್ಯವ್ಯಾಪ್ತಿಯನ್ನು ಖಾಸಗಿ ಉದ್ಯಮಗಳಿಗೂ ಸಹ ವಿಸ್ತರಿಸಲಾಯಿತು. ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಡಿಸಿದ ವಿಷಯಗಳು (ಟರ್ಮ್ಸ್ ಆಫ್ ರೆಫರೆನ್ಸ್) ಹಾಗೂ ಅಧ್ಯಯನ ಕ್ಷೇತ್ರವು ಬಹಳ ಗಹನ, ವಿಸ್ತಾರ ಮತ್ತು ತೀವ್ರತರವಾಗಿದ್ದುದರಿಂದ ಸಮಿತಿಯು ಆಳವಾದ ಅಧ್ಯಯನ ನಡೆಸಿ ತನ್ನ ಅಂತಿಮ ವರದಿಯನ್ನು ದಿನಾಂಕ ೩೧-೧೨-೮೬ ರಂದು ಸರ್ಕಾರಕ್ಕೆ ಸಲ್ಲಿಸಿದೆ.

ಅಂತಿಮ ವರದಿಯಲ್ಲಿ ೫೮ ಶಿಫಾರಸುಗಳಿವೆ. ಇವುಗಳಲ್ಲಿ ಕೆಲವು ಶಿಫಾರಸುಗಳನ್ನು ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಕೆಲವು ಶಿಫಾರಸ್ಸುಗಳು ಗಹನ ಮತ್ತು ಕ್ಲಿಷ್ಟಕರವಾಗಿರುವುದರಿಂದ ಅವುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಇನ್ನೂ ಕಾಲಾವಕಾಶ ಬೇಕು. ಸಮಿತಿಯು ಮಾಡಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಇರುವ ಸಾಧಕ ಬಾಧಕಗಳನ್ನು ಪರೀಕ್ಷಿಸಲು ಸಂಬಧಪಟ್ಟ ಇಲಾಖೆಗಳೊಡನೆ ಸಮಾಲೊಚಿಸಲಾಗುತ್ತಿದೆ. ಆ ಇಲಾಖೆಗಳು ಸಲ್ಲಿಸುವ ವರದಿಯನ್ನು ಆದರಿಸಿ ಸರ್ಕಾರವು ಅಂತಿಮ ನಿರ್ಣಯವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.

ಶ್ರೀ ಆರ್, ವೆಂಕಟರಾಮಯ್ಯ.—ಈಗ ಇಂಡಿಯಾ ದೇಶದಲ್ಲಿ ದೊಡ್ಡಗಲಾಟೆ ನಡೆಯುತ್ತಿದೆ. ಎಲ್ಲಿ ನೋಡಿದರೂ ವಿಚ್ಛಿದ್ರಕಾರಕ ಶಕ್ತಿಗಳು ತಾಂಡವಾಡುತ್ತಿವೆ. ಪಂಜಾಬಿನಲ್ಲಿ ಚಳುವಳಿ ನಡೆಯುತ್ತಿವೆ, ಖಲಿಸ್ತಾನದಲ್ಲಿ ನಡೆಯುತ್ತಿದೆ. ಇಂಥಸಂದರ್ಭಗಳಲ್ಲಿ ಮಹಿಷಿಯವರ ವರದಿ ಬಂದಿದ್ದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ನಮಗೆ ಅದನ್ನು ಇನ್ನೂ ಒದಗಿಸಿಲ್ಲ. ಅದರಲ್ಲಿ ಸ್ಪಷ್ಟವಾಗಿ ಒಂದು ಭಾಷೆ ಬಗ್ಗೆ ಅಭಿಮಾನ ಕೆರಳಿಸಿ ರಾಷ್ಟ್ರದ ವಿಚ್ಛಿದ್ರಕಾರಕ ಶಕ್ತಿಗಳು ಏನಿವೆ ಅವುಗಳಿಗೆ ಎನ್‌ಕರೇಜ್‌ಮೆಂಟ್ ಕೊಟ್ಟಂತಾಗಿದೆ. ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ಆರ್ಟಿಕಲ್ ೧೬ ಈ ರೀತಿ ಹೇಳುತ್ತದೆ.

" Equality of opportunity in matters of public employment—

(I) There shall be eqauality of opportunity for all citizens in matters relating to employment or opointment to any office under the State.